# ಹಂಪಿ ಟೈಮ್ಸ್
# HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



NOW HAMPI TIMES E-PAPER HAS BEEN REACHED
50,000
Plus readers



Place Your Ads here
Reach New Audience
9448633038 Contact For: News, Events Coverage, Ads
hampitimes@gmail.com Valmiki Circle, Hosapete-583201



ಸಂಪುಟ:01 Volume:01 • ಸಂಚಿಕೆ:268 Issue:268 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 21.03.2024 21.03.2024 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2





ಸಾವಯವ ಪದ್ಧತಿಯಲ್ಲಿ ಬೆಳೆದ ಗುಣಮಟ್ಟದ
ತೆಂಗಿನಕಾಯಿ, ಬಾಳೆ ಹಣ್ಣು, ತಾಜಾ ನುಗ್ಗೆಕಾಯಿ ಮತ್ತು
ನುಗ್ಗೆ ಸೊಪ್ಪಿಗಾಗಿ ಸಂಪರ್ಕಿಸಿರಿ
Organic Coconut & Banana, Moringa oleifera Available in best Price
98458 65204 ಮೃತ್ಯುಂಜಯನಗರ, ಹೊಸಪೇಟೆ


## ಫಾರಂ ತ್ರಿ ಕಿರಿಕಿರಿ ತಪ್ಪಿಸಿ

### ನೀತಿ ಸಂಹಿತೆ ವ್ಯಾಪ್ತಿಗೊಳಪಡದ ಕಾರ್ಯಗಳು ನಿಲ್ಲದಿರಲಿ



**ಹಂಪಿ ಟೈಮ್ಸ್ ಹೊಸಪೇಟೆ**

ಲೋಕಸಭಾ ಚುನಾವಣಾ ಮಾದರಿ ನೀತಿ ಸಂಹಿತೆ ಜಾರಿಯಾಗಿದ್ದರೂ, ನೀತಿ ಸಂಹಿತೆಗೆ ಒಳಪಡದ ಜನರ ಕೆಲವು ಬೇಡಿಕೆಗಳಿಗೆ ನಗರಸಭೆ ಅಧಿಕಾರಿಗಳು ಸ್ಪಂದಿಸಿ ಸಮರ್ಪಕವಾಗಿ ಅನುಷ್ಠಾನಗೊಳಿಸ ಸಾರ್ವಜನಿಕರ ಕೊರಗನ್ನು ದೂರಗೊಳಿಸಬೇಕು ಎಂದು ಒತ್ತಾಯಿಸಿ ವಿಜಯನಗರ ನಾಗರೀಕ ವೇದಿಕೆ ಹಾಗೂ ವಿನಾಯಕ ನಗರ ಕ್ಷೇಮಾಭಿವೃದ್ಧಿ ಸಂಘಟನೆಯ ಪದಾಧಿಕಾರಿಗಳು ಬುಧವಾರ ಪೌರಾಯುಕ್ತ ಚಂದ್ರಪ್ಪ ಅವರಿಗೆ ಮನವಿ ಸಲ್ಲಿಸಿದರು.

ವೇದಿಕೆಯ ಅಧ್ಯಕ್ಷ ವೈ.ಯಮುನೇಶ್ ಮಾತನಾಡಿ, ಹೊಸಪೇಟೆ ನಗರ ಜಿಲ್ಲಾ ಕೇಂದ್ರವಾಗಿದ್ದು, ವಿಶ್ವಪಾರಂಪರಿಕ ತಾಣವಾದ ಹಂಪಿ ಹತ್ತಿರದಲ್ಲಿರುವುದರಿಂದ ಪ್ರವಾಸಿ ಕೇಂದ್ರವಾಗಿದೆ. ನಗರಕ್ಕೆ ಬರುವ ಪ್ರವಾಸಿಗರು ಸೇರಿದಂತೆ ಸಾರ್ವಜನಿಕರಿಗೆ ಪಾರದರ್ಶಕ, ಜನಪರ ಆಡಳಿತ ನೀಡಬೇಕು ಎಂದರು.

ಅರ್ಜಿದಾರರ ಮನವಿಗಳಿಗೆ ತ್ವರಿತ ಹಾಗೂ ಭ್ರಷ್ಟಾಚಾರ ರಹಿತ ಸೇವೆ ಸಲ್ಲಿಸುವ ಜವಾಬ್ದಾರಿ ನಗರಸಭೆಯ ಮೇಲಿದೆ. ನಗರಸಭೆಯ ಪೌರಾಯುಕ್ತರು, ಚುನಾಯಿತ ಪ್ರತಿನಿಧಿಗಳು ಹಾಗೂ ಸಾರ್ವಜನಿಕರ ನಡುವೆ ಪ್ರತಿ ತಿಂಗಳಿಗೊಮ್ಮೆ ಜನ ಸಂಪರ್ಕ ಸಭೆ ನಡೆಸಿ ಸಾರ್ವಜನಿಕರ ಕುಂದು ಕೊರತೆಗಳ ನಿವಾರಣೆಗೆ ಕ್ರಮಕೈಗೊಳ್ಳಬೇಕು. ಈಗಾಗಲೆ ರಾಜ್ಯ ಸರ್ಕಾರವು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿ ತಮ್ಮ ತಮ್ಮ ವ್ಯಾಪ್ತಿಯಲ್ಲಿ ತಿಂಗಳಿಗೊಮ್ಮೆ ಜನಸಂಪರ್ಕ ಸಭೆ ಕರೆಯುವ ಆದೇಶ ಹೊರಡಿಸಿದೆ.

ಹಿರಿಯ ನಾಗರಿಕರು ಮತ್ತು ಮಹಿಳೆ ಅರ್ಜಿದಾರರ ಮನವಿಗಳಿಗೆ ತ್ವರಿತವಾಗಿ ಪರಿಹಾರ ಒದಗಿಸುವ ನಿಟ್ಟಿನಲ್ಲಿ ತಿಂಗಳಲ್ಲಿ ಎರಡು ದಿನ ಇವರ ಅರ್ಜಿಗಳಿಗೆ ವಿಶೇಷ ಆಧ್ಯತೆ ನೀಡಿ ಕಡತ ವಿಲೇವಾರಿಗೊಳಿಸಬೇಕು.

ಫಾರಂ–3 ನವೀಕರಣ ಪ್ರತಿ ಅರ್ಜಿ ಸಲ್ಲಿಕೆಯನ್ನು ಸರಳಗೊಳಿಸುವ ಬಗ್ಗೆ. ಫಾರಂ–3 ನವೀಕರಣ ಪ್ರತಿ ನೀಡಲು ಹೆಚ್ಚುವರಿಯಾಗಿ ಯಾವುದೇ ದಾಖಲೆಗಳನ್ನು ಕಡ್ಡಾಯಗೊಳಿಸಬಾರದು. ಮೊದಲ ಸಲ ಫಾರಂ–3 ಪ್ರತಿಕೊಡುವಾಗ ನಗರಸಭೆಗೆ ಸಲ್ಲಿಸಿದ ದಾಖಲೆಗಳನ್ನು ಆಧಾರವಾಗಿಟ್ಟುಕೊಂಡು ಫಾರಂ–3 ನವೀಕರಣ ಪ್ರತಿ ಕೊಡಬೇಕೆ ಹೊರತು ಎರಡನೇ ಸಲ ಸಹ ಈ ಹಿಂದೆ ಸಲ್ಲಿಸಿದ ದಾಖಲೆಗಳನ್ನು ಲಗತ್ತಿಸುವ ವ್ಯವಸ್ಥೆ ಕೈಬಿಡಬೇಕು.

ನಗರದಲ್ಲಿ ಎಲ್ಲೆಂದರಲ್ಲಿ ಕಂಡಕಂಡ ಕಡೆ ಸಾರ್ವಜನಿಕರು ಮೂತ್ರ ವಿಸರ್ಜನೆ ಮಾಡುವುದನ್ನು ತಪ್ಪಿಸಿ ಸ್ವಚ್ಚತೆ ಮತ್ತು ನೈರ್ಮಲ್ಯದ ಪರಿಸರ ಸೃಷ್ಟಿಸುವ ನಿಟ್ಟಿನಲ್ಲಿ ಪ್ರಮುಖ ಸರ್ಕಲ್‌ಗಳು ಹಾಗೂ ಅಗತ್ಯವಿರುವ ಕಡೆ ಮೂತ್ರಾಲಯಗಳ >>4

## ಮೈಕ್ರೋ ನ್ಯೂಸ್

### ಮೇವಿನ ಬಣವಿಗೆ ಬೆಂಕಿ

**ಹಂಪಿ ಟೈಮ್ಸ್ ಹೊಸಪೇಟೆ**

ತಾಲೂಕಿನ ನಾಗೇನಹಳ್ಳಿ ಗ್ರಾಮದ ಹೊರವಲಯದಲ್ಲಿ ಬುಧವಾರ ಮಧ್ಯಾಹ್ನ ಕಿಡಿಗೇಡಿಗಳು ಬೇಲಿಗೆ ಬೆಂಕಿ ಹಚ್ಚಿದ್ದ ಪರಿಣಾಮ, ಗ್ರಾಮದ ಜಿ.ಬಸವರಾಜಗೆ ಸೇರಿದ ನಾಲ್ಕು ಟ್ರ್ಯಾಕ್ಟರ್ ಭತ್ತದ ಮೇವು, ಎರಡು ಟ್ರ್ಯಾಕ್ಟರ್ ಮೆಕ್ಕೇಜೋಳ ಮೇವಿನ ಬಣವಿಗಳು ಬೆಂಕಿಗಾಹುತಿಯಾಗಿವೆ. ಕುರಿಶೆಡ್‌ನ ಕೆಲ ಸಾಮಾಗ್ರಿಗಳು ಮತ್ತು ಬೆಳೆದು ನಿಂತಿದ್ದ ಬೆಳೆಯೂ ಬೆಂಕಿ ಬೆಂಕಿಗಾಹುತಿಯಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿ ಹೆಚ್ಚಿನ ನಷ್ಟವನ್ನು ತಪ್ಪಿಸಿದ್ದಾರೆ. ಬರಗಾದಲ್ಲಿ ಒಂದು ಲಕ್ಷಕ್ಕೂ ರೂ ಅಧಿಕ ನಷ್ಟವಾಗಿದೆ ಎಂದು ಜಿ.ಬಸವರಾಜ ಅಳಲು ತೊಡಿಕೊಂಡಿದ್ದಾರೆ.


**ಇಂಡಸ್ಟ್ರೀಯಲ್ ಶೆಡ್ ಸೈಟ್ ಮಾರಾಟಕ್ಕಿದೆ**

ಹೊಸಪೇಟೆ ನಗರದ ಟಿ.ಬಿ.ಡ್ಯಾಂ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನದ ಎದುರಿನ ಕೆಎಸ್ಎಸ್ಐಡಿಸಿ (KSSIDC) ಇಂಡಸ್ಟ್ರೀಯಲ್ ಪ್ರದೇಶದಲ್ಲಿರುವ ಅನ್ನಪೂರ್ಣ ಗ್ರಾನೈಟ್ ಶೆಡ್ ಹಾಗೂ ಖಾಲಿ ಜಾಗ (L-19, R-15 ) ಎರಡು ಸೈಟುಗಳ ಒಟ್ಟು ವಿಸ್ತೀರ್ಣ 10,300 ಚ.ಅಡಿ ಇದ್ದು, ಮಾರಾಟಕ್ಕಿರುತ್ತದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ

98441 25317
99861 33299



**ಬೇಕಾಗಿದ್ದಾರೆ**

ಶಾನಭಾಗ ಟವರ್ಸ್‌ನಲ್ಲಿ ಹಾಜರಿ ಹೆಬ್ಬಟ್ಟು ಮಿಷನ್ ಹಾಕುವವರು ಬೇಕಾಗಿದ್ದಾರೆ. ಮೂರರಿಂದ ನಾಲ್ಕು Biometric Fingerprint Time & Attendance Machine ಮಷಿನ್ ಹಾಕಬೇಕಿದೆ. ಸರ್ವಿಸ್ ನೀಡಲಿಚ್ಚಿಸುವವರು ಸಂಪರ್ಕಿಸಿ.

**ಶಾನಭಾಗ ಟವರ್ಸ್ ನ್ಯಾಷನಲ್ (ಪ್ರೈ) ಲಿಮಿಟೆಡ್**
ಶಾನಭಾಗ ಸರ್ಕಲ್, ಹೊಸಪೇಟೆ–583201

9482147421
9449193615


## ಗುಬ್ಬಚ್ಚಿಗಳ ಪೋಷಣೆ ನಮ್ಮ ಕರ್ತವ್ಯ

### ಪ್ರಾಂಶುಪಾಲ ಬಸವರಾಜ್ ಎಮ್ಮಿಗನೂರ್ ಹೇಳಿಕೆ



**ಹಂಪಿ ಟೈಮ್ಸ್ ಕಮಲಾಪುರ**

ಬಾಯಾರಿಕೆ ಎಂಬುದು ಮನುಷ್ಯನಿಗಷ್ಟೇ ಅಲ್ಲ. ಪ್ರಾಣಿ ಪಕ್ಷಿಗಳಿಗೂ ಇರುತ್ತೆ ಎನ್ನುವುದನ್ನು ಪ್ರತಿಯೊಬ್ಬರು ಅರಿತು, ಏನನ್ನೂ ಬೇಡದ ಮೂಕ ಪ್ರಾಣಿ, ಪಕ್ಷಿಗಳಿಗೆ ಸ್ವಯಂಪ್ರೇರಿತವಾಗಿ ಪಕ್ಷಿಗಳಿಗೆ ದೊರೆಯುವಂತ ಸ್ಥಳಗಳಲ್ಲಿ ಕನಿಷ್ಠ ನೀರು, ಧಾನ್ಯಗಳನ್ನು ಹಾಕಿಡಬೇಕು ಎಂದು ಶ್ರೀ ಹಂಪಿ ವಿರೂಪಾಕ್ಷೇಶ್ವರ ಸ್ವಾಮಿ ಪದವಿ ಕಾಲೇಜಿನಲ್ಲಿ ಪ್ರಾಂಶುಪಾಲರಾದ ಬಸವರಾಜ್ ಎಮ್ಮಿಗನೂರ್ ಹೇಳಿದರು.

ತಾಲೂಕಿನ ಕಮಲಾಪುರದ ಶ್ರೀ ಹಂಪಿ ವಿರೂಪಾಕ್ಷೇಶ್ವರ ಸ್ವಾಮಿ ಪದವಿ ಕಾಲೇಜಿನಲ್ಲಿ ವಿಶ್ವಗುಬ್ಬಚ್ಚಿ ದಿನಾಚರಣೆಯಲ್ಲಿ ಗುಬ್ಬಚ್ಚಿಗಳಿಗೆ ನೀರಿನ ಅರವಟ್ಟಿಗೆಗಳನ್ನು ಕಟ್ಟಿ, ನೀರು ತುಂಬಿಸಿ ಮಾತನಾಡಿದರು. ಮಾನವನ ಅಭಿವೃದ್ಧಿ, ಆಧುನಿಕ ಜೀವನ ಶೈಲಿಯಿಂದ ಗುಬ್ಬಚ್ಚಿಗಳ ಅಳುವಿನಂಚಿಗೆ ತಳ್ಳಲ್ಪಟ್ಟಿವೆ. ಮನುಷ್ಯ ಇನ್ನಾದರೂ ಅವುಗಳ ಮಹತ್ವವನನು ಅರಿತು ಪ್ರಾಣಿ ಪಕ್ಷಿಗಳ ಸಂಕುಲಗಳ ರಕ್ಷಣೆಗೆ ಒತ್ತು ನೀಡಬೇಕು. ಪ್ರಾಣಿ, ಪಕ್ಷಿಗಳನ್ನು ಪೋಷಿಸುವುದು ನಮ್ಮ ಕರ್ತವ್ಯ ಎಂದು ವಿದ್ಯಾರ್ಥಿಗಳಿಗೆ ತಿಳಿಹೇಳಿದರು. ಎನ್ಎಸ್ಎಸ್ ಕಾರ್ಯಕ್ರಮ ಅಧಿಕಾರಿ ವೀಣಾ ಕೆ ಹಾಗೂ ಕಾಲೇಜಿನ ಸಿಬ್ಬಂದಿಗಳಾದ ಗೌಡರ ವಿಶ್ವನಾಥ್ ಗಂಗಮ್ಮ ಮುರುಗೇಶ್ ಹಾಗೂ ವಿದ್ಯಾರ್ಥಿಗಳು ಕಾಲೇಜಿನ ಸುತ್ತಮುತ್ತಲಿನ ಗಿಡಗಳಿಗೆ ನೀರಿನ ಅರವಟ್ಟಿಗೆಗಳನ್ನು ಕಟ್ಟಿ ಅವುಗಳಿಗೆ ನೀರು ತುಂಬಿಸಿ ಸುಡುಬಿಸಿಲಿನಲ್ಲಿ ಗುಬ್ಬಿಗಳು ಪರದಾಡುವಂತಾಗಬಾರದೆಂದು ನೀರಿನ ಅರವಟ್ಟಿಗೆಯನ್ನು ಅಲ್ಲಲ್ಲಿ ತೂಗುಹಾಕಿ ವಿಶ್ವಗುಬ್ಬಚ್ಚಿ ದಿನವನ್ನು ಅರ್ಥಪೂರ್ಣವಾಗಿ ಅಚರಿಸಿದರು.

## ಹಂಪಿಯಲ್ಲಿ 2.450 ಕೆ.ಜಿ ಗಾಂಜಾ ವಶ, ಮಾರಾಟಗಾರನ ಬಂಧನ



**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿಯ ಅಕ್ಕ– ತಂಗಿಯರ ಗುಂಡು ಬಳಿ ಅಕ್ರಮವಾಗಿ ಮಾರಾಟ ಮಾಡಲಾಗುತ್ತಿದ್ದ 2 ಕೆ.ಜಿ. 450 ಗ್ರಾಂ ಗಾಂಜಾವನ್ನು ಹಂಪಿ ಪ್ರವಾಸಿ ಪೊಲೀಸರ ಕಾರ್ಯಾಚರಣೆ ನಡೆಸಿ ವಶಕ್ಕೆ ಪಡೆಇದ್ದಾರೆ. ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಬಂಧಿಸಿ, ಎನ್‌ಡಿಪಿಎಸ್ ಕಾಯ್ದೆಯಡಿ ಹಂಪಿ ಪೊಲೀಸ್ ಪ್ರವಾಸ ಠಾಣೆಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಹಂಪಿ ಪಿಎಸ್‌ಐ ಶಿವಕುಮಾರ್ ನಾಯ್ಕ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು. ಪೊಲೀಸ್ ಸಿಬ್ಬಂದಿ ಇದ್ದರು.

## ತುಂಗಭದ್ರಾ ಡ್ಯಾಂ ಚಕ್‌ಪೋಸ್ಟ್‌ನಲ್ಲಿ 5.50 ಲಕ್ಷ ರೂ ಪೊಲೀಸರ ವಶಕ್ಕೆ



**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಹೊರವಲಯದ ಟಿಬಿ ಡ್ಯಾಂ ಚೆಕ್ ಪೋಸ್ಟ್‌ನಲ್ಲಿ ದಾಖಲೆ ಇಲ್ಲದೇ ಸಾಗಿಸುತ್ತಿದ್ದ 5.50 ಲಕ್ಷ ರೂಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಕೊಪ್ಪಳದಿಂದ ಹೊಸಪೇಟೆಗೆ ಬೈಕ್‌ನಲ್ಲಿ ಸಾಗುತ್ತಿದ್ದ ವ್ಯಕ್ತಿಯನ್ನು ಪೊಲೀಸರು ತಡೆದು ಪರಿಶೀಲಿಸಿದಾಗ, ಬ್ಯಾಗಿನಲ್ಲಿ ದಾಖಲೆ ಇಲ್ಲದೆ ಹಣ ಕಂಡು ಬಂದಿದ್ದು, ವಶಕ್ಕೆ ಪಡೆದು ತನಿಖೆ ಮುಂದುವರೆಸಿದ್ದಾರೆ. ಟಿಬಿ ಡ್ಯಾಂ ಸಿಪಿಐ ಶ್ರೀಕಾಂತ್ ಎ. ವಿ, ಪಿಎಸ್‌ಐ ಶೀಲಾ ಮೂಗಣ್ಣನವರ್, ಕ್ರೈಂ ಪಿಎಸ್‌ಐ ರವಿ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆದಲ್ಲಿ ಪೊಲೀಸ್ ಸಿಬ್ಬಂದಿ ಸುರೇಶ್ ಎಸ್ ವಿ, ಸಂತೋಷ್ ನಾಯ್ಕ್, ಹನುಮಂತಪ್ಪ ಇತರಿದ್ದರು. ಕಂದಾಯ ಇಲಾಖೆಯ ಸಿಬ್ಬಂದಿ ಕೊಟ್ರೇಶ್ ಪರಿಶೀಲನೆ ನಡೆಸಿದರು. ಟಿಬಿ ಡ್ಯಾಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮಾ.25ರಿಂದ 10ನೇ ತರಗತಿ ಪರೀಕ್ಷೆ ವೆಬ್ ಕಾಸ್ಟಿಂಗ್ ಮೂಲಕ ನಿಗಾ

**ಹಂಪಿ ಟೈಮ್ಸ್ ಹೊಸಪೇಟೆ**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆ ಪೂರ್ವ ಸಿದ್ಧತಾ ವಿಡಿಯೋ ಸಂವಾದ ಸಭೆ ಬುಧವಾರ ನಡೆಯಿತು. ಜಿಲ್ಲೆಯಲ್ಲಿ ಪರೀಕ್ಷೆ ಹಮ್ಮಿಕೊಳ್ಳಲು ಕೈಗೊಂಡ ಸಿದ್ಧತೆ ಬಗ್ಗೆ ಮಾಹಿತಿ ಪಡೆದುಕೊಂಡು. ವೆಬ್ ಕಾಸ್ಟಿಂಗ್ ಮೂಲಕ ನಿಗಾವಹಿಸುವಂತೆ ನಿರ್ದೇಶಿಸಿದರು.

ವಿಜಯನಗರ ಜಿಲ್ಲೆಯ 6 ತಾಲೂಕುಗಳಲ್ಲಿನ 35 ಸರಕಾರಿ ಪ್ರೌಢ ಶಾಲೆಗಳು, 11 ಅನುದಾನಿತ ಪ್ರೌಢ ಶಾಲೆಗಳು, 19 ಅನುದಾನರಹಿತ ಪ್ರೌಢ ಶಾಲೆಗಳು ಸೇರಿ ಒಟ್ಟು 65 ಪರೀಕ್ಷಾ ಕೇಂದ್ರಗಳನ್ನು ರಚಿಸಲಾಗಿದೆ. ಹೊಸಪೇಟೆಯಲ್ಲಿ 18, ಹಗರಿಬೊಮ್ಮನಹಳ್ಳಿ 10, ಹೂವಿನ ಹಡಗಲಿ 9, ಹರಪನಳ್ಳಿ 13, ಕೂಡ್ಲಿಗಿಯಲ್ಲಿ 15 ಕೇಂದ್ರಗಳನ್ನು ಆರಂಭಿಸಲಾಗಿದೆ. ಗುರುದೇವ ಪ್ರೌಢಶಾಲೆ ಕೊಟ್ಟೂರು, ಚಿಕ್ಕ ಜೋಗಿಹಳ್ಳಿ ಸರಕಾರಿ ಪ್ರೌಢಶಾಲೆ ಕೇಂದ್ರಗಳನ್ನು ಸೂಕ್ಷ್ಮ ಕೇಂದ್ರಗಳೆಂದು ಗುರುತಿಸಲಾಗಿದೆ. 65 ಮುಖ್ಯ ಅಧೀಕ್ಷಕರು, 22 ಉಪ ಮುಖ್ಯ ಅಧೀಕ್ಷಕರು, 65 ಪ್ರಶ್ನೆ ಪತ್ರಿಕೆ ಪಾಲಕರು, 22 ಮಾರ್ಗಗಳಿಗೆ 22 ಮಾರ್ಗಾಧಿಕಾರಿಗಳನ್ನು ನೇಮಿಸಲಾಗಿದೆ. ಜಿಲ್ಲೆಯಲ್ಲಿ 21,768 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದಾರೆ. ಒಟ್ಟು 919 ಪರೀಕ್ಷೆ ಕೊಠಡಿಗಳ ಪೈಕಿ 851 ಕೊಠಡಿಗಳಿಗೆ ಸಿ.ಸಿ.ಟಿ.ವಿ. ಕ್ಯಾಮರಾಗಳನ್ನು ಅಳವಡಿಸಲಾಗಿದೆ ಎಂದು ಜಿಲ್ಲೆಯ ಅಧಿಕಾರಿಗಳು ಪ್ರಧಾನ ಕಾರ್ಯದರ್ಶಿಗೆ ಮಾಹಿತಿ ನೀಡಿದರು. ಈ ವಿಡಿಯೋ ಸಂವಾದದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸದಾಶಿವು ಪ್ರಭು ಬಿ ಅಪರ ಜಿಲ್ಲಾಧಿಕಾರಿಗಳಾದ ಅನುರಾಧ.ಜಿ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಯುವರಾಜ್ ನಾಯ್ ಮತ್ತು ಜಿಲ್ಲೆಯ ತಾಲೂಕುಗಳ ಶಿಕ್ಷಣಾಧಿಕಾರಿಗಳು ಉಪಸ್ಥಿತರಿದ್ದರು.

## ಮತದಾನ ಮಾಡುವಲ್ಲಿ ನಿರ್ಲಕ್ಷ್ಯ ಸಲ್ಲ

### ತಾಪಂ ಇಒ ಚಂದ್ರಶೇಖರ್ ವೈ.ಎಚ್.ಹೇಳಿಕೆ | ಕೂಲಹಳ್ಳಿ ಗ್ರಾಮದಲ್ಲಿ ಸ್ವೀಪ್ ಕಾರ್ಯಕ್ರಮದ ಜಾಗೃತಿ ಜಾಥಾ

**ಹಂಪಿ ಟೈಮ್ಸ್ ಹರಪನಹಳ್ಳಿ**

ನಮ್ಮ ಭಾರತ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿದ್ದು, ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಬೇಕು ಎಂದು ತಾಲೂಕು ಮಟ್ಟದ ಸ್ವೀಪ್ ಅನುಷ್ಠಾನ ಸಮಿತಿ ಅಧ್ಯಕ್ಷ, ತಾಪಂ ಇಒ ಚಂದ್ರಶೇಖರ್ ವೈ.ಎಚ್. ಹೇಳಿದರು.

ತಾಲೂಕಿನ ಕೂಲಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೂಲಹಳ್ಳಿ ಗ್ರಾಮದ ಗೋಣಿ ಬಸವೇಶ್ವರ ಜಾತ್ರೋತ್ಸವ ಹಿನ್ನೆಲೆಯಲ್ಲಿ ತಾಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಸ್ವೀಪ್ ಜಾಗೃತಿ ಜಾಥಾಗೆ ಚಾಲನೆ ನೀಡಿ ಮಾತನಾಡಿದರು. ಮೇ 07ರಂದು ಲೋಕಸಭಾ ಚುನಾವಣೆಗೆ ಮತದಾನ ಮಾಡಬೇಕು. ಮತದಾನ ಮಾಡುವುದು ಎಲ್ಲರ ಹಕ್ಕು. ಕಡ್ಡಾಯವಾಗಿ ಮತ ಚಲಾಯಿಸಿ ಪ್ರಜಾಪ್ರಭುತ್ವ ಉಳಿಸಿ. ಮತದಾನ ಮಾಡುವಲ್ಲಿ ಜನರು ನಿರ್ಲಕ್ಷ ಬೇಜವಾಬ್ದಾರಿ



ತೋರಬಾರದು ಎಂದು ತಿಳಿಸಿದರು.

ಪಂಚಾಯತ್ ರಾಜ್ ಇಲಾಖೆಯ ಸಹಾಯಕ ನಿರ್ದೇಶಕ ವೀರಣ್ಣ ಲಕ್ಕಣ್ಣನವರ್ ಮಾತನಾಡಿ, ಈಗಾಗಲೇ ಜಿಪಂನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಆದೇಶದಂತೆ ತಾಲೂಕಿನ ಎಲ್ಲ ಗ್ರಾಪಂ ವ್ಯಾಪ್ತಿಯಲ್ಲಿ ಸ್ವೀಪ್ ಕಾರ್ಯಕ್ರಮ ಆರಂಭಗೊಳ್ಳುತ್ತಿವೆ. ಗ್ರಾಪಂಗಳ ಮುಂಭಾಗ ಸ್ವೀಪ್ ಬ್ಯಾನರ್ ಅಳವಡಿಸಿಲ್ಲ. ಅಂತಹ ಗ್ರಾಪಂ ಪಿಡಿಒಗಳಿಗೆ ಕಟ್ಟನಿಟ್ಟಿನ ಆದೇಶ ನೀಡಲಾಗುವುದು. ಮತದಾನದ ಜಾಗೃತಿ ಕಾರ್ಯ ನಿರಂತರ ಆಗಬೇಕಿದೆ. ಇನ್ನೂ 18 ವರ್ಷ ಆದ ಎಲ್ಲ ಯುವಜನತೆ ಮೊಬೈಲ್‌ನಲ್ಲೇ ವೋಟರ್ ಐಡಿ ಪಡೆಯಲು ಅವಕಾಶ ಇದೆ. ಪ್ಲೇಸ್ಟೋರ್‌ನಲ್ಲಿ "ವೋಟರ್ ಹೆಲ್ಪ್ಲೈನ್" ಎಂಬ ಆಪ್ ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ಅಗತ್ಯ ದಾಖಲೆ ಸಲ್ಲಿಸಿ ಪೂರಕ ಮಾಹಿತಿ ನೀಡಿದರೆ ತಿಂಗಳೊಳಗೆ ನಿಮ್ಮ ಕೈಗೆ ವೋಟರ್ ಐಡಿ ಸಿಗುವುದು ಎಂದು ತಿಳಿಸಿದರು.

ಗ್ರಾಪಂ ಪಿಡಿಒ ಯಮುನನಾಯ್ಕ, ಟಿಐಇಸಿ ಸಂಯೋಜಕ ಕೆ.ವಸಿಗೇರಪ್ಪ ಚಾಗನೂರು, ನರೇಗಾ ತಾಂತ್ರಿಕ ಸಂಯೋಜಕ ನಾಗರಾಜ ನಾಯ್ಕ, ಮಲ್ಲಿಕಾರ್ಜುನ ಪೂಜಾರ್, ತಾಂತ್ರಿಕ ಸಹಾಯಕ ಅಭಿಯಂತರ ಮಲ್ಲಿಕಾರ್ಜುನ್ ಪೂಜಾರ್, ಗ್ರಾಪಂ ಹಾಗೂ ತಾಪಂ ಸಿಬ್ಬಂದಿ, ಬಿಎಫ್ಟಿಗಳು, ಗ್ರಾಮ ಕಾಯಕ ಮಿತ್ರರು, ತಾಂಡಾ ರೋಜಗಾರ್ ಮಿತ್ರರು, ಹಾಜರಾಗಿದ್ದರು.

> ಹರಪನಹಳ್ಳಿ ತಾಲೂಕಿನ 37 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಏಪ್ರಿಲ್ ಆರಂಭದಿಂದಲೇ ನರೇಗಾದಡಿ ಹೂಳೆತ್ತುವ ಕೆಲಸಗಳಿಗೆ ಸಾವಿರಾರು ನರೇಗಾ ಕೂಲಿಕಾರರು ಆಗಮಿಸಲಿದ್ದಾರೆ. ಕಾಮಗಾರಿ ಸ್ಥಳಗಳಲ್ಲೇ ಸ್ವೀಪ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ. ನಮ್ಮ ಹರಪನಹಳ್ಳಿ ತಾಲೂಕಿನಲ್ಲಿ ಸ್ವೀಪ್ ಕಾರ್ಯಕ್ರಮ ಬಹಳ ಅರ್ಥಪೂರ್ಣವಾಗಿ ಕೈಗೊಳ್ಳಲಾಗುವುದು.
>
> **| ಯು.ಎಚ್.ಸೋಮಶೇಖರ್**
> **ನರೇಗಾ ಸಹಾಯಕ ನಿರ್ದೇಶಕ, ಹರಪನಹಳ್ಳಿ**




|| ಶ್ರೀ ಸಿದ್ಧಿವಿನಾಯಕ ಪ್ರಸನ್ನ ||
**ಕೇರಳ ಮಾಂತ್ರಿಕ ಜ್ಯೋತಿಷ್ಯರು**
ಕೇರಳದ ಮಳಯಾಳ ಕುಟ್ಟಿಚಾತನ್ ಪದ್ಧತಿಯಿಂದ ಶೀಘ್ರ ಪರಿಹಾರ



9880956386
ವಿದ್ಯೇ ಉದ್ಯೋಗ, ಲೈಂಗಿಕ ಸಮಸ್ಯೆ, ಸ್ತ್ರೀ–ಪುರುಷ ಪ್ರೇಮವಿವಾಹಕ್ಕೆ ಯಂತ್ರ ಪೂಜೆ, ಮಾಟ–ಮಂತ್ರ ಸೇರಿದಂತೆ ಯಾವುದೇ ಸಮಸ್ಯೆಗಳಿದ್ದರೂ ಶೀಘ್ರ ಹಾಗೂ ಶಾಶ್ವತ ಪರಿಹಾರ ಶತಸಿದ್ಧ.
ಸಂಪರ್ಕಿಸಿರಿ: ಪಂ.ಪೊದುವಾಳ್ ಎಸ್.ಜಿ.ಅಣ್ಣಪ್ಪ ಕುಮಾರನ್, ಶ್ರೀಸಿದ್ಧಿವಿನಾಯಕ ದೇವಸ್ಥಾನ ಹತ್ತಿರ(ಮನೆ), ಹೊಸಪೇಟೆ, ವಿಜಯನಗರ ಜಿಲ್ಲೆ

# ವಚನ ಅರಿವು

## ನಾವೇ ಕಾಣಬೇಕು

**ಮನ ಕತ್ತಲೆ, ತನು ಹಮ್ಮು, ನೆನಹು ಮರವೆ,**
**ಇವರೊಳಗೆ ಇದ್ದು ಘನವ ಕಂಡೆಹೆನೆಂಬ ಅಣ್ಣಗಳಿರಾ, ನೀವು ಕೇಳಿರೊ.**
**ಘನವು ಕಾಂಬುದಕ್ಕೆ ಮನವೆಂತಾಗಬೇಕೆಂದಡೆ,**
**ಅಕ್ಕಿಯ ಥಳಿಸಿದಂತೆ, ಹಲ್ಲ ಸುಲಿದಂತೆ, ಕನ್ನಡಿಯ ನೋಡಿದಂತೆ,**
**ಮನ ನಿರ್ಮಲವಾದಲ್ಲದೆ ಘನವ ಕಾಣಬಾರದು**
**ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.**

**– ಹಡಪದಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮ**

ಮನಸ್ಸಿನಲ್ಲಿ ಭ್ರಮೆಯನ್ನು ಅಜ್ಞಾನವನ್ನು ತುಂಬಿಕೊಂಡು, ದೇಹದ ಮೇಲಿನಮಮಕಾರದಿಂದಸೊಕ್ಕಿ,ಅಹಂಕಾರಬಲಿತುಕೊಂಡಿರುವವರಿಗೆ ಮನಸ್ಸಿನಲ್ಲಿ ಅರಿವು ಮೂಡದೆ, ಮರವೆಯೇ ತುಂಬಿರುವವರಿಗೆ ಮಹತ್ವದ ಅರಿವಿನ ಘನ ಚೈತನ್ಯ ಕಾಣುವುದಿಲ್ಲ. ದೇಹ, ಮನಸ್ಸಿನಲ್ಲಿ ಸುಳ್ಳು ಭ್ರಮೆಯನ್ನು ತುಂಬಿಕೊಂಡು ಶಿವನನ್ನು ಕಂಡಿದ್ದೇವೆ. ಎಲ್ಲವನ್ನು ತಿಳಿದುಕೊಂಡಿದ್ದೇವೆ ಎನ್ನುವವರು ಸುಳ್ಳು ಹೇಳುತ್ತಾರೆ. ಜನರನ್ನು ನಂಬಿಸುತ್ತಿದ್ದಾರೆ ಎಂದೇ ಅರ್ಥ. ಘನವಾದ ಅರಿವನ್ನು ಚೈತನ್ಯಾತ್ಮಕ ಶಕ್ತಿಯನ್ನು ಕಂಡವರ ಮನವು ಹೇಗಿರುತ್ತದೆ ಎಂದರೆ ಅಕ್ಕಿಯನ್ನು ಕುಟ್ಟಿ ಮಾಡಿದ ರುಚಿಯ ಅಡುಗೆಯಂತೆ, ಸೊಕ್ಕು, ಹಮ್ಮು ಕಳೆದು ಮನ ನಿರಾಳಗೊಂಡಂತೆ, ಕನ್ನಡಿಯಲ್ಲಿ ತನ್ನನ್ನೆ ನೋಡಿಕೊಂಡಂತೆ, ತನ್ನ ಅರಿವಿನ ಆಳದಲ್ಲಿ ಮುಳುಗಿದರೆ ಪರಬ್ರಹ್ಮ ಎಂಬ ಘನವನ್ನು ಅರಿಯಬಹುದು ಎನ್ನುತ್ತದೆ ಈ ವಚನ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

# ಬೆಳಕಿನ ಹಾದಿ

## ಮಕ್ಕಳ ಮಾತಿಗೆ ಉಸಿರು ಚೆಲ್ಲಿದ ಅಪ್ಪ



■ ರೇಖಾ ಕನ್ನಡತಿ

ಒಂದು ಊರಲ್ಲಿ ರಾಮರಾವ್ ಅನ್ನೋ ಶ್ರೀಮಂತ ವ್ಯಕ್ತಿ ಇರ್ತಾನೆ. ಅವನಿಗೆ ಇಬ್ಬರು ಗಂಡು ಮಕ್ಕಳು. ಅವರನ್ನ ತುಂಬಾ ಪ್ರೀತಿಯಿಂದ, ಅಕ್ಕರೆಯಿಂದ ಬೆಳೆಸುತ್ತಾನೆ. ರಾಮರಾವ್ ಅವರು ಹೆಂಡತಿ ಜಾನಕಿಗೆ ವಿಪರೀತ ಮಕ್ಕಳ ಮೇಲೆ ವ್ಯಾಮೋಹ. ಅವರಿಗೆ, ಒಳ್ಳೆಯ ವಿದ್ಯಾಭ್ಯಾಸ ನೀಡಿದರು, ಇಬ್ಬರು ಮಕ್ಕಳು ವಿದೇಶಕ್ಕೆ ಕೆಲಸಕ್ಕಾಗಿ ಹೋದವರು ಮರಳಿ ಬರದೇ, ನಮ್ಮ ದೇಶದ ಹುಡುಗಿಯರನ್ನ ಮದುವೆಯಾಗಿ ಅಲ್ಲಿಯೇ ಶಾಶ್ವತವಾಗಿ ನೆಲೆಸುತ್ತಾರೆ. ಇತ್ತ ತಾಯಿ ಜಾನಕಿಗೆ ಮಕ್ಕಳ ಚಿಂತೆಯಲ್ಲಿ ಹಾಸಿಗೆ ಹಿಡಿದು ನರಳತೊಡಗುತ್ತಾರೆ. ದಿನದಿಂದ ದಿನಕ್ಕೆ ಆರೋಗ್ಯ ಕ್ಷೀಣಿಸುತ್ತಾ ಸಾವಿಗೆ ಹತ್ತಿರವಾಗುತ್ತಿದ್ದಾರೆ. ಮಕ್ಕಳಿಗೆ ರಾಮರಾವ್ ರವರು ಪರಿಸ್ಥಿತಿಯನ್ನ ವಿವರಿಸಿ ಹೇಳಿದರೂ, ಕೆಲಸದ ಒತ್ತಡದಲ್ಲಿ ಬರದೇ ಹೋಗುತ್ತಾರೆ. ಕೊನೆಗೆ ತಾಯಿ ಇಹ ಲೋಕ ತೊರೆದ ಸುದ್ದಿ ಕೇಳಿ ಚಿಕ್ಕ ಮಗ ಹೆಂಡತಿಯೊಂದಿಗೆ ತಾಯಿಯ ಅಂತ್ಯ ಸಂಸ್ಕಾರಕ್ಕೆ ಬರುತ್ತಾನೆ. ಆದರೆ ಆ ತಾಯಿ ಜೀವ ಮಕ್ಕಳಿಗಾಗಿ ಹಂಬಲಿಸಿ ಹಂಬಲಿಸಿ ಪ್ರಾಣವನ್ನೇ ತೊರೆದು ಹೋಗಿತ್ತು. ರಾಮರಾವ್ ಅವರು ಅಣ್ಣ ಯಾಕೆ ಬಂದಿಲ್ಲ ಅಂದಾಗ ಏನೋ ಒಂದು ಕಾರಣ ಕೊಟ್ಟು ಸುಮ್ಮನಾಗುವನು ಆದರೆ ತನ್ನ ಹೆಂಡತಿ ಮುಂದೆ ಈಗ ನಾನು ಬಂದಿದೀನಿ, ಅಪ್ಪ ಸತ್ತಾಗ ಅಣ್ಣ ಬರುತ್ತಾನೆ ಆಗ ನಾನು ಬರುವುದಿಲ್ಲ ಎಂಬ ಮಾತುಗಳು ತಂದೆಯ ಕಿವಿಗೆ ಸಿಡಿಲಂತೆ ಅಪ್ಪಳಿಸುತ್ತದೆ. ಹಿಂದಿನ ದಿನಗಳು ಅವರ ಕಣ್ಣುಮುಂದೆ ಹಾದು ಹೋದವು. ಮಕ್ಕಳ ಬೆಳೆಸುವಲ್ಲಿ ಆಗಿರುವ ತಪ್ಪನ್ನು ವಿಮರ್ಶಿಸುತ್ತಾ, ಕೇಳಿದ್ದೆಲ್ಲಾ ಕೊಡಿಸುತ್ತಾ ಓದು, ಹಣದ ಬಗ್ಗೆ ಹೆಚ್ಚಿನ ಗಮನ ಕೊಡುತ್ತಾ ಹೋದೆ, ಪ್ರೀತಿ, ವಿಶ್ವಾಸ, ಆಚಾರ, ವಿಚಾರ, ಸಂಸ್ಕೃತಿ, ಸಂಸ್ಕಾರಗಳ ಬಗ್ಗೆ ತಿಳಿಸದೇ ಹೋಗಿದ್ದು ಇಂದಿನ ಪರಿಸ್ಥಿತಿಗೆ ಕಾರಣವಾಯಿತೆನೋ ಅಂತ, ಆ ಕ್ಷಣ ಮಮ್ಮಲನೆ ಮರುಗಿದ್ದರು ರಾಮ್ ರಾವ್. ಆ ಕ್ಷಣವೇ ತಮ್ಮ ಆಸ್ತಿ, ಹಣ, ಎಲ್ಲವನ್ನು ಅನಾಥಾಶ್ರಮ, ವೃದ್ಧಾಶ್ರಮಗಳಿಗೆ ಬರೆದು, ತಾವು ಒಂದು ಪತ್ರದಲ್ಲಿ, ಇನ್ನೆಂದು ನಮ್ಮನ್ನೆಲ್ಲ ನೋಡುವ ತೊಂದರೆಯಾಗುವುದಿಲ್ಲ ಎಂದು ಅವರು ಕೂಡಾ ಪ್ರಾಣವನ್ನ ಬಿಡುತ್ತಾರೆ..

ಹೀಗೆ ನಾವು ಅಂದರೆ ದೊಡ್ಡವರೆನಿಸಿಕೊಂಡವರು ಮಕ್ಕಳಿಗೆ ಅನೇಕ ವಿಚಾರಗಳನ್ನ ತಿಳಿಸಿಕೊಡಬೇಕಿದೆ. ಸದಾ ಬ್ಯುಸಿ ಎನ್ನುವ ಪದ ತೆಗೆದು ಹಾಕಿ ಅವರಿಗಾಗಿ ಸಮಯ ಮೀಸಲಿಟ್ಟು ಪರಿಸ್ಥಿತಿಯಗಳ ಆಗು ಹೋಗುಗಳ ಬಗ್ಗೆ, ಹಿರಿಯರು, ಕಿರಿಯರ ಮಹತ್ವ, ಅವರಿಗೆ ಕೊಡಬೇಕಾದ ಗೌರವ, ಮನೆ, ಕುಟುಂಬ, ಸಮಾಜದಲ್ಲಿ ಹೇಗಿರಬೇಕು, ಹೇಗಿರಬಾರದು ಎಂಬುದನ್ನ ತಿಳಿಸಿಕೊಡಬೇಕಿದೆ ಆಗ ಖಂಡಿತಾ ಒಳ್ಳೆಯ ಬದಲಾವಣೆಯನ್ನ ಕಾಣಬಹುದು. ಇಂದಿನ ಮಕ್ಕಳನ್ನ ಬೆಳಕಿನೆಡೆ ಕರೆದೊಯ್ಯುವ ಜವಾಬ್ದಾರಿ ನಮ್ಮದೇ ಅಲ್ಲವೇ...

## 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ.


**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com M: 9448633038

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು,**
**ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು**
**ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ.**
**ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

# ಸಂವಿಧಾನ ಪೀಠಿಕೆ: ಮುಂಗಾಣ್ಕೆಯ ಕನ್ನಡಿ




ಭಾರತದ ಸಂವಿಧಾನವು ಒಂದು ಪುಟ್ಟ ಪೀಠಿಕೆಯಿಂದ ಆರಂಭವಾಗುತ್ತದೆ. ಇದು ನಮ್ಮ ಪ್ರಾಚೀನ ಕಾವ್ಯಗಳ ನಾಂದೀಪದ್ಯದಂತಿದೆ. ಕಾರಣ, ಅಲ್ಲಿ ಮೊದಲು ಪದ್ಯವು ಇಡೀ ಕಾವ್ಯದ ಆಶಯವನ್ನು ಹೇಳುತ್ತದೆ– ಹನಿ ಇಡೀ ಹೊಳೆಯ ಬಗ್ಗೆ ಹೇಳುವಂತೆ. ಅದರಂತೆ, ಸದರಿ ಪೀಠಿಕೆಯು ಸಂವಿಧಾನದ ಆಶಯವನ್ನು ಮಾತ್ರವಲ್ಲದೆ, ರೂಪುಗೊಳ್ಳಬೇಕಾದ ಭಾರತದ ಪರಿಕಲ್ಪನೆಯನ್ನೇ ಮುಂದಿಡುತ್ತದೆ. ಎಂತಲೇ ಇದನ್ನು ಬಾಬಾಸಾಹೇಬರು 'ಭಾರತದ ಭವಿಷ್ಯದ ಜೀವನವಿಧಾನದ ಕನ್ನಡಿ' ಎಂದು ಬಣ್ಣಿಸಿದರು.

ಪೀಠಿಕಾ ಪುಟವನ್ನು ಶಾಂತಿನಿಕೇತನದ ಕಲಾವಿದ ರಾಮಮನೋಹರ್ ಸಿನ್ಹಾ ತಮ್ಮ ಚಿತ್ರಕಲೆಯ ಮೂಲಕ ಸಿಂಗರಿಸಿದರು. ಈ ಮೂಲಕ ಅಂಬೇಡ್ಕರರ ಬೌದ್ಧಿಕ ಪ್ರಖರತೆ ಮತ್ತು ದಾರ್ಶನಿಕತೆಗೆ, ಧಾರ್ಮಿಕ ರಾಷ್ಟ್ರವಾದದ ಕಟು ವಿಮರ್ಶಕರಾಗಿದ್ದ ಟಾಗೂರರ ಶಾಂತಿನಿಕೇತನದ ಅಂಶವೂ ಮಿಳಿತವಾದಂತಾಯಿತು. ಸಂವಿಧಾನ ಸಭೆಯು ಪೀಠಿಕೆಯನ್ನು 1949ರ ನ. 26ರಂದು ಅಳವಡಿಸಿತು; ಜನವರಿ 26ರಂದು ಇದು ಜಾರಿಯಾಯಿತು.

ವಾಸ್ತವವಾಗಿ ಈ ಪೀಠಿಕೆ ಶುರುವಾಗುವುದು ಅಶೋಕ ಚಕ್ರದ ಮೂಲಕ. ಅಶೋಕ ಎಂದರೆ ದುಃಖರಾಹಿತ್ಯ. ನೆತ್ತರ ಕಾಳಗಕ್ಕೆ ಹೇಸಿ ಅಹಿಂಸೆಯನ್ನುಆದರ್ಶಮೌಲ್ಯವಾಗಿಒಪ್ಪಿಕೊಂಡಚಕ್ರವರ್ತಿಯೊಬ್ಬನ ಹೆಸರಲ್ಲಿರುವ ಈ ಚಿಹ್ನೆಗೆ ಬೌದ್ಧ ಹಿನ್ನೆಲೆಯಿದೆ. ಚಲನೆಯ ಸಂಕೇತವಾದ ಚಕ್ರದ ಶೋಧವು ಮಾನವನ ನಾಗರಿಕತೆಯ ವಿಕಾಸದಲ್ಲಿ ಕ್ರಾಂತಿಕಾರಕ ಪಲ್ಲಟಗಳನ್ನು ತಂದಿತಷ್ಟೆ. ಬುದ್ಧನ ಧರ್ಮಚಕ್ರದ ಕಲ್ಪನೆಯಲ್ಲೂ ಲೋಕದ ಬಾಳು ನಿರಂತರ ಪರಿವರ್ತನಶೀಲವಾಗಿದೆ ಎಂಬ ತತ್ವವಿದೆ; ಬಾಳು–ವ್ಯಕ್ತಿಯದಾಗಿರಲಿ, ನಾಡಿನದಾಗಿರಲಿ ನಿಲ್ಲಬಾರದು. ನಿಂತು ಸ್ಥಾವರಗೊಂಡರೆ ಪತನವಾಗುತ್ತದೆ ಎಂಬ ಧ್ವನಿಯಿದೆ. ಸಂಪ್ರದಾಯವಾದಿ ಸಮಾಜಗಳಲ್ಲಿ ಪರಿವರ್ತನಶೀಲ ತತ್ವಗಳಿಗೆ ಚಾರಿತ್ರಿಕ ಮಹತ್ವವಿರುತ್ತದೆ. ಸಂವಿಧಾನ ಪೀಠಿಕೆಯಲ್ಲಿ ಸಿಂಧೂ ನದಿಯ ಹಿನ್ನೆಲೆಯಲ್ಲಿ ಹುಟ್ಟಿದ 'ಇಂಡಿಯಾ' ಶಬ್ದವು ಮೂರು ಸಲ ಕಾಣಿಸುತ್ತದೆ. ಚಲಿಸುವ ಚಕ್ರವೂ, ಹರಿವ ಹೊಳೆಯೂ ಹೇಳುವ ದಿಟವು ಒಂದೇ.

ಅಶೋಕ ಚಕ್ರದಡಿ 'ಸತ್ಯಮೇವ ಜಯತೆ' ಎಂಬ ಮಂಡೂಕೋಪನಿಷತ್ತಿನ ವಾಕ್ಯವಿದೆ. ಇದನ್ನು ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಮದನಮೋಹನ ಮಾಳವೀಯರು ರಾಷ್ಟ್ರೀಯ ಚಳವಳಿಗೆ (1918) ಜೋಡಿಸಿದರು. ಬ್ರಿಟಿಷರ ಆಳ್ವಿಕೆ ವಿರೋಧಿಸುತ್ತಿದ್ದ ಭಾರತೀಯರಿಗೆ 'ಸತ್ಯ' ಅರ್ಥಾತ್ ನ್ಯಾಯವು ನಮ್ಮ ಕಡೆಯಿದೆ; ಅಸತ್ಯದ ಸಂಕೇತವಾಗಿರುವ ಬ್ರಿಟಿಷರನ್ನು ಸೋಲಿಸಿ ನಾವೇ ಗೆಲ್ಲುತ್ತೇವೆ ಎಂದು ಭರವಸೆ ನೀಡುವುದು ಇದರ ಇರಾದೆಯಾಗಿತ್ತು. ಗಾಂಧಿ, ಇದೇ ಶಬ್ದವನ್ನಿಟ್ಟುಕೊಂಡು 'ಸತ್ಯಾಗ್ರಹ'ದ ಪರಿಕಲ್ಪನೆ ರೂಪಿಸಿದರು; 'ಸತ್ಯದೊಡನೆ ನನ್ನ ಪ್ರಯೋಗಗಳು' ಎಂಬ ಆತ್ಮಕಥೆಯನ್ನೂ ಬರೆದರು. ವಾಸ್ತವವಾಗಿ ತಾರತಮ್ಯ ನಡಾವಳಿಯಿರುವ ಸಮಾಜಗಳಲ್ಲಿ ಸರ್ವಸಮ್ಮತ ಸತ್ಯವೆಂಬುದು ಇರುವುದಿಲ್ಲ. ಅದು ಸದಾ ಸಾಪೇಕ್ಷ (ರಿಲೇಟಿವ್) ಆಗಿರುತ್ತದೆ. ಇಂಥ ಸನ್ನಿವೇಶದಲ್ಲಿ ದುರ್ಬಲರ ದೃಷ್ಟಿಕೋನದಲ್ಲಿ ಕಂಡ 'ಸತ್ಯ'ವೇ ಗೆಲ್ಲಬೇಕು; ಅಧಿಕಾರಸ್ಥರ ಕಣ್ಣೋಟದ ಸತ್ಯವಲ್ಲ. ಹೀಗೆ ಪೀಠಿಕಾ ಚಿಹ್ನೆ ಮತ್ತು ಧ್ಯೇಯವಾಕ್ಯಗಳು ಬೌದ್ಧ ಮತ್ತು ಉಪನಿಷತ್ ದರ್ಶನದ ಧಾರೆಗಳ ಸಂಗಮಗೊಳಿಸುತ್ತವೆ.

ಈ ಪೀಠಿಕೆಯಲ್ಲಿ ಮೂರು ಭಾಗಗಳಿವೆ. ಮೊದಲ ಭಾಗವು ಬರುವ ದಿನಮಾನದಲ್ಲಿ ದೇಶವು ಏನಾಗಬೇಕೆಂದು ವ್ಯಾಖ್ಯಾನಿಸುತ್ತದೆ. 'ಭಾರತದ ಜನತೆಯಾದ ನಾವು, ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ರೂಪಿಸುವುದಕ್ಕಾಗಿ' ಎಂಬ ಆಶಯವನ್ನದು ಮುಂದಿಡುತ್ತದೆ. ಈ ವಾಕ್ಯ ಶುರುವಾಗುವುದು 'ವಿ' (ನಾವು) ಶಬ್ದದಿಂದ. ಈ ಬಹುವಚನ ಸೂಚಕ ಶಬ್ದವು ದೇಶದ ಸಮಸ್ತ ಪ್ರಜೆಗಳನ್ನು ಅವರ ಜಾತಿ–ಧರ್ಮ, ಪ್ರದೇಶ–ಭಾಷೆ ಜನಾಂಗ–ಲಿಂಗಗಳನ್ನು ಪರಿಗಣಿಸದೆ ತಬ್ಬಿಕೊಳ್ಳುವ ತೆರೆದ ತೋಳಿನಂತಿದೆ. ಇದು ಹೊಮ್ಮಿಸುವ ಅರ್ಥವು ಪೀಠಿಕೆಯಲ್ಲಿ ಬರುವ 'ಎಲ್ಲಾ ಪ್ರಜೆಗಳಿಗೆ' 'ಎಲ್ಲರಲ್ಲಿ ಸೋದರತೆ' ಇತ್ಯಾದಿ ಪದಗುಚ್ಛಗಳಲ್ಲಿ ಮತ್ತೆ ಮತ್ತೆ ಮುಖದೋರುತ್ತದೆ.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Scan For Digital Colourful
HAMPI TIMES E-paper

ಪೀಠಿಕೆಯಲ್ಲಿ ದೇಶವನ್ನು 'ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯ' ಎಂದು ಕರೆಯಲಾಗಿದೆ. 'ಸಾರ್ವಭೌಮ' ಪರಿಕಲ್ಪನೆಯು ದೇಶವು ಸರ್ವಸ್ವತಂತ್ರವಾಗಿದ್ದು ಯಾರಿಗೂ ಅಡಿಯಾಳಲ್ಲ ಎಂಬರ್ಥವುಳ್ಳದ್ದು. ಬ್ರಿಟಿಷರ ಗುಲಾಮಗಿರಿಯಿಂದ ಬಿಡುಗಡೆಯಾದ ಹಿನ್ನೆಲೆಯಲ್ಲಿ ಈ ಪರಿಕಲ್ಪನೆಗೆ ಸ್ವಾತಂತ್ರ್ಯ ಹೋರಾಟದ ಗಾಢ ನೆನಪುಗಳಿವೆ.

'ಸಮಾಜವಾದಿ' ಪರಿಕಲ್ಪನೆಯು ಬಡತನ–ಸಿರಿತನದ ಅಂತರವಿರುವ ಮತ್ತು ಸಂಪತ್ತಿನ ಸಂಗ್ರಹವಿರುವ ದೇಶದಲ್ಲಿ, ಸಮಾನ ಹಂಚಿಕೆಯ ಆಶಯವನ್ನೇ ಉಸುರುತ್ತಿದೆ. 'ಧರ್ಮನಿರಪೇಕ್ಷ'ವು ಬಹುಧಾರ್ಮಿಕ ನಾಡಿನಲ್ಲಿ ಪ್ರಭುತ್ವದ ನಿಲುವೇನಾಗಿರಬೇಕು ಎಂದು ಸೂಚಿಸುತ್ತಿದೆ. ಸಹಸ್ರಾರು ವರ್ಷಗಳ ರಾಜರ ಆಳ್ವಿಕೆಯಿಂದಲೂ ಎರಡು ಶತಮಾನಗಳ ವಸಾಹತುಶಾಹಿ ಆಳ್ವಿಕೆಯಿಂದಲೂ ಮುಕ್ತವಾದ ದೇಶವೊಂದು, ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುತ್ತೇನೆಂದು ಘೋಷಿಸುವುದು, ಒಂದು ಚಾರಿತ್ರಿಕ ಮಹತ್ವದ ವಿದ್ಯಮಾನವೇ ಸರಿ. ಗಣರಾಜ್ಯ ಎಂದರೆ, ಪ್ರಭುತ್ವದ ನಾಯಕತ್ವವು ವಂಶ ಪರಂಪರೆಯಿಂದ ಬಾರದೆ, ಜನರ ಆಯ್ಕೆಯಿಂದ ಸಿದ್ಧವಾಗುವ ವ್ಯವಸ್ಥೆ. ಸ್ವಾತಂತ್ರ್ಯ ಗಳಿಕೆಯ ಮೂರು ವರ್ಷಗಳ ಬಳಿಕ ಸ್ವಂತ ಸಂವಿಧಾನದ ಮೂಲಕ ಭಾರತ ಗಣರಾಜ್ಯವಾಯಿತು.

ಪೀಠಿಕೆಯ ಎರಡನೇ ಭಾಗವು ಸಂವಿಧಾನದ ಹೃದಯವಾಗಿದ್ದು, ಮೊದಲ ಭಾಗದ ಆಶಯಗಳಿಗೆ ವಿವರಣೆ ಕೊಡುತ್ತದೆ. 'ಭಾರತದ ಎಲ್ಲಾ ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು; ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು ಉಪಾಸನೆಯ ಸ್ವಾತಂತ್ರ್ಯವನ್ನು; ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು ದೊರೆಯುವಂತೆ ಮಾಡುವುದಕ್ಕಾಗಿ; ವ್ಯಕ್ತಿಗೌರವ ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ ಸೋದರತೆ ಭಾವನೆಯನ್ನು ಮೂಡಿಸುವುದಕ್ಕೆ' ಸಂವಿಧಾನವನ್ನು ರಚಿಸಲಾಗಿದೆ ಎಂದದು ಘೋಷಿಸುತ್ತದೆ. ಇವು ದೇಹದ ಅಂಗಾಂಗಗಳು ಬಿಡಿಬಿಡಿಯಾಗಿದ್ದರೂ ದೇಹಾರೋಗ್ಯಕ್ಕೆ ಪರಸ್ಪರ ಕೂಡಿ ದುಡಿಯುವಂತಿವೆ. ಈ ಪರಿಕಲ್ಪನೆಗಳಲ್ಲಿ ಒಂದನ್ನು ಹೊರತುಪಡಿಸಿದರೂ ಉಳಿದವಕ್ಕೆ ಅರ್ಥವಿಲ್ಲ ಎಂದು ಅಂಬೇಡ್ಕರ್ ಹೇಳಿದರು.

ಹೀಗಾಗಿಯೇ, ಇಲ್ಲಿರುವ 'ನ್ಯಾಯ'ವು ಸಾಮಾಜಿಕ, ಆರ್ಥಿಕ, ರಾಜಕೀಯ ಸಂಗತಿಗಳಿಗೂ; 'ಸ್ವಾತಂತ್ರ್ಯ'ವು ವಿಚಾರ ಅಭಿವ್ಯಕ್ತಿ ನಂಬಿಕೆ, ಧರ್ಮ ಮತ್ತು ಉಪಾಸನೆಗೂ; 'ಸಮಾನತೆ'ಯು ಸ್ಥಾನಮಾನ ಮತ್ತು ಅವಕಾಶಗಳಿಗೂ; ಸೋದರತೆಯು ಮಾನವ ಸಂಬಂಧಗಳಿಗೂ ಸಂಬಂಧಿಸಿದೆ.

ಮೂರನೆಯ ಭಾಗವು, ಮೇಲ್ಕಾಣಿಸಿದ ಆದರ್ಶ ಮೌಲ್ಯಗಳನ್ನು ಅಳವಡಿಸಿಕೊಂಡು ಬದುಕಲು ಮತ್ತು ನಾಡನ್ನು ಕಟ್ಟಲು 'ದೃಢಸಂಕಲ್ಪ ಮಾಡಿ, ನಮ್ಮ ಸಂವಿಧಾನ ಸಭೆಯಲ್ಲಿ 1949ರ ನವೆಂಬರ್ 26ನೇ ದಿನದಂದು ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು, ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ' ಎಂದು ಪಣ ತೊಡುತ್ತದೆ. ಇಲ್ಲಿ 'ಅರ್ಪಿಸಿಕೊಳ್ಳುವ', 'ಅಂಗೀಕರಿಸುವ', 'ವಿಧಿಸಿಕೊಳ್ಳುವ' ಕ್ರಿಯಾರೂಪಗಳಿವೆ. ಮೌಲ್ಯಾದರ್ಶಗಳನ್ನು ರೂಪಿಸಿಕೊಂಡವರೇ ಅವನ್ನು ತಮಗೆ ಅರ್ಪಿಸಿಕೊಳ್ಳುವ ಮತ್ತು ಸ್ವೀಕರಿಸುವ ಕಲ್ಪನೆಯೇ ವಿನೂತನ. ನುಡಿದಂತೆ ನಡೆಯುತ್ತೇವೆ ಎಂದು ಬದ್ಧತೆ ಪ್ರಕಟಿಸುವಿಕೆ ಇಲ್ಲಿದೆ.

ಸಂವಿಧಾನವು, ಹೊಸ ದೇಶ ಮತ್ತು ಸಮಾಜ ಕಟ್ಟಲೆಂದು ರೂಪಿತಗೊಂಡ, ಕಾನೂನಿನ ಜಟಿಲ ಪರಿಭಾಷೆಯಲ್ಲಿ ರಚಿತವಾದ ಹಲವಾರು ಅನುಚ್ಛೇದಗಳಿಂದ ತುಂಬಿದ ಒಂದು ಪತ್ರ. ಅದಕ್ಕೆ ಬರೆಯಲಾದ ಈ ಪೀಠಿಕೆಯು ಘನವಾದ ಮೌಲ್ಯಾದರ್ಶಗಳಿಂದ ಕೂಡಿ ಬಾಗಿಲು. ಇಲ್ಲಿನ ಪ್ರತಿಯೊಂದು ಶಬ್ದವನ್ನೂ ಎಚ್ಚರದಿಂದಲೂ, ದೂರದೃಷ್ಟಿಯಿಂದಲೂ ಸೇರಿಸಲಾಗಿದೆ. ಇಲ್ಲಿರುವ 'ನ್ಯಾಯ', 'ಸ್ವಾತಂತ್ರ್ಯ', 'ಸಮಾನತೆ' ಇತ್ಯಾದಿ ಕಲ್ಪನೆಗಳ ಹಿಂದೆ ಫ್ರೆಂಚ್ ಕ್ರಾಂತಿಯ ಪ್ರೇರಣೆ ಇರಬಹುದು. ಇಲ್ಲಿರುವ 'ಧರ್ಮಾತೀತ' ಪರಿಕಲ್ಪನೆ ಪಶ್ಚಿಮದಿಂದ ಬಂದಿದ್ದು ಎನ್ನಲಾಗುತ್ತದೆ. ಆದರೆ, ಇವೆಲ್ಲವೂ ಭಾರತೀಯ ಪರಂಪರೆಯಲ್ಲಿ ಬೇರೊಂದು ರೂಪದಲ್ಲಿ ಇದ್ದೇ ಇದ್ದವು. 'ಕವಿರಾಜಮಾರ್ಗ'ವು ಪ್ರಣಾಳಿಕೆ ರೂಪದಲ್ಲಿ ಮುಂದಿಡುವ 'ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ ಪರಧರ್ಮಮುಂ ಪರವಿಚಾರಮುಂ' ಎಂದು ಹೇಳಿದೆ; ಹಲವು ಧರ್ಮದವರು ಸೋದರರಂತೆ ಬದುಕಬೇಕೆಂದು ಕಬೀರನಿಂದ ಹಿಡಿದು ಗಾಂಧಿತನಕ ಅನೇಕರು ಹೇಳಿದ್ದಾರೆ; 'ಹಿಂದೂಕ್ರೈಸ್ತ ಮುಸಲ್ಮಾನ ಪಾರಸಿಕ ಜೈನರುದ್ಯಾನ', 'ಹಂ ಬುಲಬುಲೇ ಹೈ ಇಸಕೇ, ಏ ಗುಲಸಿತಾ ಹಮಾರ' ಎಂದು ಕವಿಗಳು ಹಾಡಿದ್ದಾರೆ.

ನಮ್ಮ ಪರಂಪರೆಯಲ್ಲಿದ್ದ ಮೌಲ್ಯಗಳನ್ನು ಪಶ್ಚಿಮದ ವೈಚಾರಿಕತೆ, ವೈಜ್ಞಾನಿಕ ಮನೋಭಾವ, ಹಕ್ಕುಪ್ರಜ್ಞೆ ಹಾಗೂ ಧರ್ಮಾತೀತತೆಗಳ ಜತೆ ಕಸಿಗೊಳಿಸಿ ಹೊಸ ಪರಿಕಲ್ಪನೆಗಳನ್ನಾಗಿ ಸೃಷ್ಟಿಸಲಾಯಿತು ಮತ್ತು ಪೀಠಿಕೆಯಲ್ಲಿ ಹಾಕಿ ಅಧಿಕೃತಗೊಳಿಸಲಾಯಿತು. ಹೀಗಾಗಿ ಇಲ್ಲಿರುವ ಆದರ್ಶ ಮೌಲ್ಯಗಳು, ಪಾಶ್ಚಿಮಾತ್ಯ ನಾಗರಿಕ ಸಮಾಜದ ಅದಿರನ್ನು ಭಾರತೀಯ ಪರಂಪರೆಯ ಕುಲುಮೆಯಲ್ಲಿ ಕರಗಿಸಿ ಅಚ್ಚುಹಾಕಿದ ನಾಣ್ಯಗಳು; ಗತದ ವಿವೇಕದಿಂದ ಮಾಡಿದ ಭವಿಷ್ಯದ ಹಾದಿಗಳು.

ಪ್ರಶ್ನೆಯೆಂದರೆ, ಈ ಆಶಯಗಳು ಕಳೆದ ಎಪ್ಪತ್ತೈದು ವರ್ಷಗಳಲ್ಲಿ ಎಷ್ಟರಮಟ್ಟಿಗೆ ನೆರವೇರಿದವು? ಇಲ್ಲವಾದರೆ ಇಂಥ ಉದ್ಘೋಷಣೆಯ ಪ್ರಸ್ತುತತೆ ಏನು? ನಿಜ, ಇಲ್ಲಿರುವ ಆಶಯಗಳು ಪೂರ್ಣ ಸಾಕಾರಗೊಂಡಿಲ್ಲ. ಧರ್ಮಾತೀತ ಗುಣವು ಕಳೆದ ಮೂರು ದಶಕಗಳಲ್ಲಿ ಹಿಂದೆಂದೂ ಇಲ್ಲದಷ್ಟು ಜಖಂಗೊಂಡಿದೆ; ಮಹಿಳೆಯರು, ದಲಿತರು, ಬುಡಕಟ್ಟಿನವರು, ಅಲೆಮಾರಿಗಳು, ಧಾರ್ಮಿಕ ಅಲ್ಪಸಂಖ್ಯಾತರು ಅಸಮಾನತೆ–ಶಂಕೆ–ಅಪಮಾನಗಳಿಂದ ಬಿಡುಗಡೆಯಾಗಿಲ್ಲ; ಮಾರುಕಟ್ಟೆ ಆರ್ಥಿಕ ವ್ಯವಸ್ಥೆಯನ್ನು ಒಪ್ಪಿಕೊಂಡ ಬಳಿಕ ಸಂಪತ್ತೆಂಬುದು ಕೆಲವೇ ಉದ್ಯಮಿಗಳ ಕೈವಶವಾಗುತ್ತಿದೆ. ಧರ್ಮಗಳು ತಮ್ಮ ವಿಕಾರಗಳನ್ನು ಉತ್ಪತ್ತಿ ಮಾಡಿ ಬೀದಿಗಿಳಿಸಿವೆ. ದೇಶದ ನಾಲ್ಕನೇ ಸ್ಥಂಭವೆನಿಸಿದ ಮಾಧ್ಯಮಗಳು ಬಿಕರಿಗೊಂಡಿವೆ. ಅಭಿವ್ಯಕ್ತಿ ಸ್ವಾತಂತ್ರ್ಯ ಅರೆಜೀವವಾಗಿದೆ. ಕುವೆಂಪು ಹೇಳುವ ನಿರಂಕುಶಮತಿತ್ವವು ಧರ್ಮದ್ರೋಹ ದೇಶದ್ರೋಹವಾಗಿ, ಚಿಂತಕರ ಹತ್ಯೆಯಾಗುತ್ತಿದೆ. ಜನ ಉಣ್ಣುವ ಆಹಾರವು ತಿರಸ್ಕಾರಕ್ಕೆ ಗುರಿಯಾಗುತ್ತಿದೆ. ಮುಖ್ಯವಾಗಿ, ಸಂವಿಧಾನದ ಹೆಸರಲ್ಲಿ ಅಧಿಕಾರ ಸ್ವೀಕರಿಸಿದವರೇ ಪೀಠಿಕೆಯ ಆಶಯಕ್ಕೆ ಸಲ್ಲದಂತೆ ವರ್ತಿಸುತ್ತಿದ್ದಾರೆ. ನಾವು ಒಂದು ದೇಶವಾಗಿ, ಸಮಾಜವಾಗಿ, ಮೌಲ್ಯಾದರ್ಶಗಳ ದೃಷ್ಟಿಯಿಂದ ವಿರುದ್ಧ ಹಾದಿಯಲ್ಲಿದ್ದೇವೆಂದು ಅನಿಸುತ್ತದೆ. ಆದರೆ, ಈ ಪೀಠಿಕೆಯ ಚೌಕಟ್ಟಿನಲ್ಲಿ ಅನೇಕ ಇಕ್ಕಟ್ಟುಗಳಲ್ಲೂ ನಾವು ಕಳೆದ ಮುಕ್ಕಾಲು ಶತಮಾನದಲ್ಲಿ ಸ್ವಾತಂತ್ರ್ಯ, ನ್ಯಾಯ, ಸಮಾನತೆಗಳನ್ನು ಅರೆಬರೆಯಾಗಿಯಾದರೂ ಅನುಭವಿಸಿರುವುದು ಸುಳ್ಳಲ್ಲ. ಯಾವುದೇ ಮೌಲ್ಯಾದರ್ಶಗಳು ತಾವು ಬದುಕುವ ಸಾಮಾಜಿಕ ಚಾರಿತ್ರಿಕ ಸನ್ನಿವೇಶದಲ್ಲಿ ಅರ್ಥವನ್ನು ಪಡೆಯುತ್ತವೆ. ಅವನ್ನು ಬರೆದು ಇರಿಸಿಕೊಳ್ಳುವುದು ದೊಡ್ಡ ವಿಚಾರವಲ್ಲ. ಬದುಕುವುದು ಮುಖ್ಯ.

ಈ ಅರ್ಥದಲ್ಲಿ ಸಂವಿಧಾನದ ಆದರ್ಶಗಳು ಇನ್ನೂ ಪೂರ್ಣವಾಗಿ ನಿಜಗೊಂಡಿಲ್ಲ. ಅವು ಸಾಕಾರಗೊಳ್ಳಲು ಶತಮಾನಗಳೇ ಬೇಕಾಗಬಹುದು. ಅದಕ್ಕಾಗಿ ಪ್ರಭುತ್ವವೂ ಸಮಾಜವೂ ಪ್ರಾಮಾಣಿಕವಾಗಿ ಯತ್ನಿಸಬೇಕು. ಸಮಸ್ಯೆಯೆಂದರೆ, ಈ ಯತ್ನದ ಹಾದಿಯಲ್ಲಿರುವಾಗಲೇ, ಪ್ರಭುತ್ವಗಳು ಸಂವಿಧಾನದ ಆಶಯಗಳ ವಿರುದ್ಧವಾಗಿ ಹೊರಳಿಕೊಳ್ಳುತ್ತಿರುವುದು. ಈಗ ಸಂವಿಧಾನದ ಪೀಠಿಕೆಯಲ್ಲಿರುವ ಕೆಲವು ಪರಿಕಲ್ಪನೆಗಳು ಸನಾತನ ಪರಂಪರೆಗೆ ಬಾಹಿರ ಎನ್ನಲಾಗುತ್ತಿದೆ. ಇವನ್ನು ಕಿತ್ತುಹಾಕಬೇಕು. ಧರ್ಮಾಧಾರಿತ ದೇಶಕ್ಕೆ ಬೇಕಾಗುವಂತೆ ಸಂವಿಧಾನವನ್ನು ಪುನರಾರೂಪಿಸಬೇಕು ಎಂದು ಹವಣಿಸಲಾಗುತ್ತಿದೆ.

ಪೌರತ್ವ ಕುರಿತ ಹೊಸ ಕಾನೂನುಗಳು ಈ ಪ್ರಶ್ನೆಯನ್ನು ತರ್ಕದ ಇನ್ನೊಂದು ತುದಿಗೆ ಒಯ್ಯಲು ನಿರ್ಧರಿಸಿವೆ. ಸುಪ್ರೀಂಕೋರ್ಟ್ ಕೇಶವಾನಂದ ಪ್ರಕರಣದಲ್ಲಿ (1973) ಯಾವುದೇ ಸಂವಿಧಾನದ ಅನುಚ್ಛೇದಗಳ ವಿಷಯದಲ್ಲಿ ಭಿನ್ನಮತ ಬಂದರೆ, ಅವನ್ನು ಪೀಠಿಕಾ ನುಡಿಗಳ ಆಧಾರದಲ್ಲಿ ಬಗೆಹರಿಸಿಕೊಳ್ಳಬೇಕೆಂದು ತೀರ್ಪಿತ್ತಿದೆ. ಹೀಗಾಗಿ ಈ ಪೀಠಿಕೆಯ ಈ ಮಾತುಗಳು ಮತ್ತೆಮತ್ತೆ ನೆನಪಾಗುತ್ತವೆ– ಹಾದಿತಪ್ಪಿದಾಗ ಕೈಮರ ನೆನಪಾಗುವಂತೆ. ಕಣ್ಣು ಮಂಜಾದಾಗ ಕನ್ನಡಕ ನೆನಪಾಗುವಂತೆ. ನಾವೆ ಅಲೆಗಳಲ್ಲಿ ಬಿದ್ದು ಹೊಯ್ದಾಡುವಾಗ ದೂರದ ದೀಪಸ್ಥಂಭ ಕಾಣುವಂತೆ.

## ಎಲ್ಲಿ ಹೋದವ್ರೂ ಎಲ್ಲ ಕಾಣದಾದವ್ರೋ......

ಅದು ನಮ್ಮ ಬಾಲ್ಯದ ದಿನಗಳು. ಬೆಳಿಗ್ಗೆ ಹಕ್ಕಿಗಳ ಚಿಲಿಪಿಲಿ ಕಲರವ ಮನಸಿಗೆ ಹೊಸ ಹುಮ್ಮಸ್ಸು ತುಂಬುವ ಚೈತನ್ಯದ ಚಿಲುಮೆ ಸಾಲು ಸಾಲುಗಳ ರಾಶಿಯ ನವರಂಗಿನ ಹಕ್ಕಿಗಳ ಮಧುರ ಭಾವ ಸ್ವರ, ಸಂಜೆಯಾಗುತ್ತಿದ್ದಂತೆ ಹಕ್ಕಿಗಳು ಗೂಡು ಸೇರುವ ಮುನ್ನ, ಮನೆಯ ಮುಂದಿನ ಅಂಗಳಕ್ಕೆ ಅಪ್ಪ ಹಿಡಿಯಕ್ಕಿ ತರಿಸಿ ಗುಬ್ಬಚ್ಚಿ ತಿನ್ನಲೆಂದು ಚೆಲ್ಲಿಸುತ್ತಿದ್ದರು. ಅಮ್ಮ ನೀರಿನಲ್ಲಿ ನೆನೆಸಿ ಒಣಗಿಸಲು ಇಟ್ಟ ಧಾನ್ಯಗಳನ್ನು ಕಾಯಲೆಂದು ನಮ್ಮನ್ನು ಅದರ ಮುಂದೆ ಕೂರಿಸುತ್ತಿದ್ದಳು. ನೂರಾರು ಗುಬ್ಬಚ್ಚಿಗಳು ಚಿಲಿಪಿಲಿ ನಾದದೊಂದಿಗೆ ಹೆಣ್ಣು ಗಂಡು ಗುಬ್ಬಚ್ಚಿಗಳು ಜೋಡಿ ಜೋಡಿಯಾಗಿ ಏಕಕಾಲಕ್ಕೆ ಮನೆಯ ಅಂಗಳದ ತುಂಬಾ ಹಾರಾಡುತ್ತಿದ್ದವು. ಹಾಕಿದ ಹಿಡಿ ಅಕ್ಕಿಯನ್ನು ಕ್ಷಣಮಾತ್ರದಲ್ಲಿ ತಿಂದು ರೊಯ್ಯನೆ ಹಾರಿ ಹೋಗುತ್ತಿದ್ದವು. ಕುಳಿತು ಮಾತನಾಡುವ ಟೆಲಿಫೋನ್ ಕಾಣದಾದಾಗಿನಿಂದ ಅದರ ಜಾಗಕ್ಕೆ ಓಡಾಡಿಕೊಂಡು ಮಾತನಾಡುವ ಟಚ್ ಸ್ಕ್ರೀನ್ ಮೊಬೈಲ್ ಫೋನ್ ಬಂದಾಗಿನಿಂದ, ಕೃಷಿ ಪದ್ಧತಿಯಲ್ಲಿ ಬದಲಾವಣೆ ಆದ ಪರಿಣಾಮ ಮನೆಯ ಹೊಸ್ತಿಲಲ್ಲಿ ಗೂಡು ಕಟ್ಟಿ ಮರಿ ಮಾಡುತ್ತಿದ್ದ ಗುಬ್ಬಚ್ಚಿಗಳೆಲ್ಲ ಹೇಳ ಹೆಸರಿಲ್ಲದಂತೆ ನಮ್ಮ ಹಳ್ಳಿಗಳಲ್ಲಿಯೂ ಕೂಡ ಮಾಯವಾಗಿದ್ದಾವೆ. 25 ರಿಂದ 40 ಗ್ರಾಂ ತೂಕದ ಈ ಪುಟ್ಟ ಹೃದಯದ ಗುಬ್ಬಚ್ಚಿ ರೈತನ ಮಿತ್ರನು ಕೂಡ ಆಗಿತ್ತು. ಮನುಷ್ಯನ ಜೀವನ ಹಕ್ಕಿಪಕ್ಷಿಗಳೊಂದಿಗೆ ನಡೆಯಬೇಕು. ಇದು ಪ್ರಕೃತಿ ನಿಯಮ ಕೂಡ ಹೌದು. ಪ್ರಕೃತಿಯಲ್ಲಿರುವ ಈ ಸಮತೋಲನವನ್ನು ಸರಿದೂಗಿಸಿಕೊಳ್ಳದೆ ಹೋದರೆ ಮನುಷ್ಯ ಮುಂದೊಂದು ದಿನ ಒಬ್ಬಂಟಿಗನಾಗಿ ಅನೇಕ ಖಿನ್ನತೆಗಳೊಂದಿಗೆ ಬದುಕಬೇಕಾಗುತ್ತದೆ.ಮನುಷ್ಯ ಸಂಕುಲದ ಸಮೃದ್ಧ ಬದುಕಿಗಾಗಿ ನಾವೆಲ್ಲ ಪರಿಸರಕ್ಕೆ ಪೂರಕವಾಗಿ ಚಿಂತಿಸೋಣ.

**। ಬಿಂದು ಆರ್ ಡಿ ರಾಂಪುರ**
ಉಪನ್ಯಾಸಕಿ, ಲೇಖಕಿ, ಶ್ರೀ ಬಾಪೂಜಿ ಇಂಡಿಪೆಂಡೆಂಟ್ ಪಿಯು ಕಾಲೇಜು, ಹುಕ್ಕೇರಿ, ಬೆಳಗಾವಿ,



# ಕಿರುತೆರೆಯಿಂದ ಬೆಳ್ಳಿತೆರೆಗೆ ಸಂತೋಷ ಪಯಣ

## ನಾಯಕಿ ಸ್ಪಂದನ ಸೋಮಣ್ಣ ನಟನೆಯ ಪ್ರಮೋದ್ ಜಯ್ ನಿರ್ದೇಶನದ 'ದಿಲ್ ಖುಷ್' ಸಿನಿಮಾದಲ್ಲಿ ಸಂತೋಷ್ ನಟನೆ

## ವಿಜಯನಗರ ಜಿಲ್ಲೆ ಕೂಡ್ಲಿಗಿಯ ಕ್ರೀಯಾಶೀಲ ಕುವರ ಸಂತೋಷ್ ಕುಮಾರನ ಸಿನಿ ಜರ್ನಿ । ಹೊಸಪೇಟೆಯಲ್ಲಿ ಪದವಿ ಶಿಕ್ಷಣ

■ ದೀಪಶ್ರೀ ಎಸ್ ಕೂಡ್ಲಿಗಿ

ಸಾಧಿಸಬೇಕೆಂಬುವ ಹಂಬಲ ಛಲವಿದ್ದಾಗ ಅನೇಕ ಸವಾಲುಗಳ ನಡುವೆಯೂ ಕನಸನೊತ್ತು ಸಾಗಿದಾಗ, ಕಲೆ ಸಾಧಕನ ಸೊತ್ತೆ ಹೊರತು ಸೋಮಾರಿಯ ಸೊತ್ತಲ್ಲ. ಕಲೆಯನ್ನು ಪ್ರಾಮಾಣಿಕವಾಗಿ ಪ್ರೀತಿಸುವವರಿಗೆ ಹಲವಾರು ಅವಕಾಶಗಳು ಒದಗಿ ಬರುತ್ತವೆ ಎಂಬುದಕ್ಕೆ ಜನಮಾನಸದಲ್ಲಿ ನೆಲೆಯೂರುತ್ತಿರುವ ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಯುವ ಪ್ರತಿಭೆ ಸಂತೋಷಕುಮಾರ್ ಎಸ್ ಇದಕ್ಕೆ ಸಾಕ್ಷಿಯಾಗಿದ್ದಾರೆ.

ನಟನೆಯ ಗೀಳನ್ನು ಹಚ್ಚಿಕೊಂಡ ಈ ಯುವಕ ಕಿರುತೆರೆಗೆ ಪದಾರ್ಪಣೆ ಮಾಡಿ ಯಶಸ್ಸು ಕಂಡು ಹಿರಿತೆರೆಯಲ್ಲೂ ಮಿಂಚುತ್ತಿರುವ ಕ್ರಿಯಾಶೀಲ ಪ್ರತಿಭೆ. ಸ್ಥಳೀಯ ನಿವಾಸಿಗಳಾದ ಶಿವಣ್ಣ ಹಾಗೂ ನಾಗರತ್ನಮ್ಮ ದಂಪತಿಯ ಕಿರಿಯ ಪುತ್ರ ಸಂತೋಷಕುಮಾರ್ ಬಾಲ್ಯದಲ್ಲೇ ನೃತ್ಯ, ನಟನೆ ಆಸಕ್ತಿಯನ್ನು ನಟನೆಯನ್ನೇ ಮೈಗೂಡಿಸಿಕೊಂಡಿದ್ದು, ಈಗ ನಟನೆಯನ್ನೆ ವೃತ್ತಿಯಾಗಿಸಿಕೊಂಡಿದ್ದಾರೆ. ಪಿಯು ಶಿಕ್ಷಣವನ್ನು ಕೂಡ್ಲಿಗಿಯಲ್ಲಿ ಮುಗಿಸಿ, ಪದವಿ ವ್ಯಾಸಂಗವನ್ನು ಹೊಸಪೇಟೆಯ ಆನಂದ್ ಸಿಂಗ್ ಕಾಲೇಜಿನಲ್ಲಿ ಪೂರ್ಣಗೊಳಿಸಿದ್ದಾರೆ. ಬಳಿಕ ಏನನ್ನಾದರೂ ಸಾಧಿಸುವ ಛಲ ಹೊತ್ತ ಯುವಕ ಸಂತೋಷ್ ನಟನೆಯನ್ನು ಆಯ್ದುಕೊಂಡು ಪಯಣವನ್ನು ಬೆಳಸಿದರು.

**ಮಾ.22 ದಿಲ್ ಖುಷ್ ತೆರೆಗೆ**

### ಕಿರುತೆರೆ

ಈ ಯುವ ಪ್ರತಿಭೆಗೆ ಆರಂಭದಲ್ಲಿ ಸಾಥ್ ನೀಡಿದ್ದು, ಪ್ರಖ್ಯಾತ ಹಿರಿಯ ನಿರ್ದೇಶಕ ಟಿ.ಎಸ್ ನಾಗಾಭರಣ. ನಂತರ ಸಂತೋಷ್ ಎರಡು ತಿಂಗಳು ಬೆಂಗಳೂರಿನ ಬಾಪ ಸಂಸ್ಥೆಯಿಂದ ನಟನಾ ತರಬೇತಿ ಪಡೆದರು. ಅಲ್ಲಿಂದ ಸಂತೋಷ್ ನಟನೆಯ ಜರ್ನಿ ಶುರುವಾಗಿದ್ದು, ಉದಯ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ ಕಾವೇರಿ, ಜೋ ಜೋ ಲಾಲಿ, ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ ಇಷ್ಟದೇವತೆ, ಸುವರ್ಣದಲ್ಲಿ ಪ್ರಸಾರವಾಗುತ್ತಿದ್ದ ಪ್ರೇಮಲೋಕ, ಸಿರಿಗನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ 'ಸರ್ಕಾರಿ ನ್ಯಾಯಬೆಲೆ ಅಂಗಡಿ ಪಾಂಡವಪುರ, ಪ್ರಸ್ತುತ ಸಿರಿ ಕನ್ನಡದಲ್ಲಿ ಪ್ರಸಾರವಾಗುತ್ತಿರುವ ಅಮೃತ ಘಳಿಗೆ ಧಾರಾವಾಹಿಯಲ್ಲಿ ನಟಿಸಿ ತಮ್ಮ ಅಭಿನಯದ ಚಾಪನ್ನು ಕಿರುತೆರೆಯಲ್ಲಿ ಮೂಡಿಸುತ್ತಿದ್ದಾರೆ.



### ಹಿರಿತೆರೆ

ಸಂತೋಷ ಕಿರುತೆರೆಯಲ್ಲಿ ತಮ್ಮ ಪ್ರತಿಭೆಯನ್ನು ಸಾಬೀತು ಮಾಡುವುದನ್ನು ಗಮನಿಸಿದ ಹಿರಿತೆರೆಯ ನಿರ್ದೇಶಕರು ಸಂತೋಷಗೆ ಅವಕಾಶ ನೀಡಿದ್ದು, ಧನ್ವಿರ್ ಹಾಗೂ ಶ್ರೀಲೀಲಾ ನಟನೆಯ "ಬೈ ಟೂ ಲವ್" ಸಿನಿಮಾದಲ್ಲಿ ನಾಯಕನ ಸ್ನೇಹಿತನ ಪಾತ್ರದಲ್ಲಿ ಸಹ ಕಲಾವಿದನಾಗಿ ಮಿಂಚಲು ಅವಕಾಶ ನೀಡಿದರು. ಯುವ ನಟ ಆರ್ಯವರ್ಧನ್ ಹಾಗೂ ನಾಯಕಿ ಪ್ರತಿಭಾ ನಟನೆಯ "ಕ್ರಷ್" ಸಿನೆಮಾ ಬಿಡುಗಡೆಯಾಗಿ ಯಶಸ್ಸು ಕಂಡಿತು, ಇದರಲ್ಲೂ ಸಂತೋಷ್ ನಟಿಸಿದ್ದಾರೆ. ಜೊತೆಗೆ ಕನ್ನಡತಿ ಧಾರಾವಾಹಿ ಖ್ಯಾತಿಯ ಕಿರಣ್ ರಾಜ್ ನಟನೆಯ "ಚಿಕನ್ ಪುಳಿಯೋಗರೆ "ಹಾಗೂ 'ಶೇರ್' 'ಲವ್ ಮಾಕ್ ಟೈಲ್' ಖ್ಯಾತಿಯ ಅಭಿಲಾಷ್ ನಟನೆಯ ಬಿಡುಗಡೆಗೆ ಸಿದ್ಧವಾದ 'ಇದು ನಿಮ್ ಕಥೆ' ಮತ್ತು ನಾಯಕ ನಟ ರಂಜಿತ್ ಹಾಗೂ ನಾಯಕಿ ಸ್ಪಂದನ ಸೋಮಣ್ಣ ನಟನೆಯ ಪ್ರಮೋದ್ ಜಯ್ ನಿರ್ದೇಶಕರ 'ದಿಲ್ ಖುಷ್' ಸಿನಿಮಾದಲ್ಲಿ ಸಂತೋಷ್ ನಟಿಸುತ್ತಿದ್ದು, ಹೆಮ್ಮೆಯ ಸಂಗತಿ. ಇದೇ ಶುಕ್ರವಾರ ರಾಜ್ಯಾದ್ಯಂತ "ದಿಲ್ ಖುಷ್" ಬಿಡುಗಡೆ ಆಗಲಿದೆ.

### ನಟ, ಸ್ನೇಹಿತರ ಪ್ರೋತ್ಸಾಹ

ಗ್ರಾಮೀಣ ಭಾಗದ ಈ ಯುವ ಪ್ರತಿಭೆಗೆ ಕುಟುಂಬದವರು, ಸ್ನೇಹಿತರು, ಪ್ರವೀಣ್ ಸಾಗರ್, ಸಂತೋಷ್, ಶರತ್, ಸುನಿಲ್ ಅಸೋಸಿಯೇಷನ್, ನಟ ವಿಜಯ್ ಸೂರ್ಯ, ನಟ ನಟಿಯರು, ಕಲಾವಿದರು, ತಂತ್ರಜ್ಞರು,ಇವರಿಗೆ ಪ್ರೋತ್ಸಾಹಿಸಿದ್ದು ಸಾಧನೆಗೆ ಸಹಕಾರಿಯಾಗಿದೆ.

### ಹೆಚ್ಚಿದ ಆತ್ಮವಿಶ್ವಾಸ

ಉದಯ ವಾಹಿನಿಯ ನಿರ್ದೇಶಕ ಶಿಡ್ಲಘಟ್ಟ ಶ್ರೀನಿವಾಸ್, ಇಷ್ಟದೇವತೆಯ, ಸಹ ನಿರ್ದೇಶಕ ವೆಂಕಟೇಶ್, ಸುವರ್ಣ ವಾಹಿನಿಯ ನಿರ್ದೇಶಕ ಮಧು, ಸರ್ಕಾರಿ ನ್ಯಾಯಬೆಲೆ ಅಂಗಡಿ ಪಾಂಡುಪುರದಲ್ಲಿ ನಿರ್ದೇಶಕ ಶ್ರೀನಿವಾಸ ಹಾಗೂ ನಿರ್ಮಾಪಕ ದೇವಣ್ಣ, ಸಿರಿ ಕನ್ನಡದ ಅಮೃತ ಘಳಿಗೆ ಧಾರಾವಾಹಿ ನಿರ್ದೇಶಕ, ನಿರ್ಮಾಪಕರು ಸಂತೋಷ್‌ಗೆ ಅವಕಾಶ ನೀಡಿದ್ದು, ಕಲಾ ನೈಪುಣ್ಯ ಸಾರಲು ರಹದಾರಿ ಸಿಕ್ಕಂತಾಗಿದೆ. ವಿಜಯ್ ಕುಮಾರ್ ನಿರ್ದೇಶನದ "ಕ್ಲಾಪ್ ಬೋರ್ಡ್" ಶಾರ್ಟ್ ಮೂವೀ ಮಾಡಿದ್ದು, ಈ ಶಾರ್ಟ್ ಫಿಲ್ಮ್ ಬೆಂಗಳೂರು ಹಾಗೂ ಗೋವಾ ಅಂತಾರಾಷ್ಟ್ರೀಯ ಫಿಲ್ಮ್ ಫೆಸ್ಟಿವಲ್ ಆಯ್ಕೆಯಾಗಿದೆ. ಸಂತೋಷ್ ನಲ್ಲಿ ಆತ್ಮವಿಶ್ವಾಸ ಹೆಚ್ಚಿಸಿದೆ. ಬ್ಯಾಂಗ್ ಸಿನಿಮಾ ನಿರ್ದೇಶಕ ಗಣೇಶರ 'ದಿ ಸಮಸ್ಯೆ ಮ್ಯಾನ್' ವೆಬ್ ಸೀರಿಸ್ ನಲ್ಲಿ ಸಂತೋಷ ನಟಿಸುತ್ತಿದ್ದು, ಅವರ ಸಿನಿ ಪಯಣ ಸಾಗುತ್ತಲೇ ಇದೆ. ಒಟ್ಟು 6 ಧಾರಾವಾಹಿ, 6 ಸಿನೆಮಾ, ಒಂದು ಶಾರ್ಟ್ ಫಿಲ್ಡ್ ಒಂದು ವೆಬ್ ಸೀರಿಸ್ ನಲ್ಲಿ ಸಂತೋಷ್ ಕುಮಾರ್ ಅಭಿನಯವನ್ನು ಸಾದರ ಪಡಿಸಿದ್ದು, ಜನಮಾನಸದಲ್ಲಿ ಉಳಿಯಲು ಕಾರಣವಾಗಿದೆ.

## ಕವಿ ಮನಸು

### ಇದು ಯಾವೂರ ಭಾಷೆ?




ಕನ್ನಡ ನಾಡಿದು ನಮ್ಮದು ಎನ್ನುವ
ಹೆಮ್ಮೆಯು ಹರಿದಿದೆ ನರನಾಡಿ
ಕನ್ನಡ ಮಾತೆಗೆ ಮಣಿಯುವ ಭಕ್ತಿಯು
ನಮ್ಮಯ ಎದೆಯಲಿ ಮನೆಮಾಡಿ


ನೌಕರಿ ಹಿಡಿಯಲು ಬರುವರು ಕೆಲವರು
ಜೀವನ ಪಯಣಕೆ ರಹದಾರಿ
ಅಂಗಡಿ ಇರಿಸಲು ಬರುವರು ಹಲವರು
ಲಾಭವ ದೃಷ್ಟಿಯ ವ್ಯಾಪಾರಿ

ಕನ್ನಡ ಮಾತೆಯು ದೂರಕೆ ತಳ್ಳದೆ
ಮಡಿಲನ್ನೀವಳು ಮಮತೆಯಲಿ
ಬದುಕನು ನೀಡಿದ ಕನ್ನಡ ಮಾತೆಗೆ
ಗೌರವ ಇಲ್ಲವೆ ಇವರಲ್ಲಿ?

ಕನ್ನಡ ಅರಿಯದ ಯಾರನೊ ಕರೆವರು
ಬರೆಸಲು ಕನ್ನಡ ಬರಹಗಳ
ಏನಿದರರ್ಥವು ಯಾರಿಗೆ ಅರಿವುದು?
ಮಾಡುವರಿಂತಹನರ್ಥಗಳ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಬರೇ..ಬಿಸಿಲು..



ಬಿಸಲು ಮಹಾ ಬಿಸಲು
ಉರಿದು ಝಳಪಿಸೋ ಬಿಸಿಲು
ಉತ್ತರ ಕರ್ನಾಟಕದ
ನೆತ್ತಿಗೆ ಕೆಂಡ ಕಾಯೋ ಬಿಸಿಲು

ಕಲ್ಯಾಣ ಕರ್ನಾಟಕದ
ಉರಿ ಬಿಸಲ ಕರ್ನಾಟಕದ
ರೈತರ ಪಾದವು ಸುಡುತಿದೆ
ಗಂಟಲೊಣಗಿಸಿ ದಹಿಸುತಿದೆ
ನೆರಳು ನೀರಿಗೆ ಮೊರೆಗೊಂಡಿದೆ

ಬಿಸಿಲು ಅಧಿಕ.. ಅಧಿಕ..
ತುಂಗಭದ್ರಾ ಕೃಷ್ಣಾ ಜಲ ತಳತನಕ
ಜನ ನೀರ ದಾಹದಿ ಬಸವಳಿದು
ವಣ ಹೊಲದಲಿ ಹನಿ ತಂಪಿಗೆಂದು
ನೆತ್ತಿ ಉರಿ ಸೂರ್ಯಗೆ ಶಪಿಸಿದೆ

ಬಾವಿ ಬೋರು ನೀರ ಸೆಲೆ ಬತ್ತಿ
ಕೆರೆ ಹಳ್ಳ ವಣಗಿ ಬಾಯಿ ಬಿರಿದು
ಕೃಷಿ ತೃಷೆಯೇ ಕ್ಷೋಭೆಗೊಂಡು
ಬಿತ್ತನೆ ಇಲ್ಲದೇ ಕಳೆಗೆಟ್ಟಿದೆ
ಬಾಳ ಹೊಟ್ಟೆ ಬೆನ್ನಿಗಂಟಿದೆ

ಬಲು ಬಿಸಿಲು ರೈತಗೆ ಬರೆ ಎಳೆದಂತೆ
ಸಾಲದ ಬೀಜ ಗೊಬ್ರ ವ್ಯರ್ಥದಂತೆ
ಹಳ್ಳಿ ಬದುಕು ಹೈರಾಣದಂತೆ
ನಾಡಿಗೆ ಆಹಾರದ ಆಹಾಕಾರದಂತೆ

ಬಾನಲಿ ಮೋಡ ಮುತ್ತಲಿ
ಕಾರ್ಮೋಡ ಕರಗಿ ಧರೆಗಿಳಿಯಲಿ
ಭೂತಾಯಿ ಮಳೆಯಲಿ ಮಿಂದು
ಒಕ್ಕಲಿಗ ಒಕ್ಕಲಿ ನಾಡು ಬಿಕ್ಕದಿರಲಿ

– ಸೋ.ದಾ.ವಿರೂಪಾಕ್ಷಗೌಡ
ಹೊಸಪೇಟೆ

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಬೇಳೂರು ಗ್ರಾಮದಲ್ಲಿ ಸ್ವೀಪ್ ಜಾಥಾ

■ ಹಂಪಿ ಟೈಮ್ಸ್ ಕೊಪ್ಪಳ

ಲೋಕಸಭಾ ಸಾರ್ವತ್ರಿಕ ಚುನಾವಣೆ ನಿಮಿತ್ಯ ಮತದಾನ ಕುರಿತು ಮತದಾರರಲ್ಲಿ ಜಾಗೃತಿ ಮೂಡಿಸಲು ಕೊಪ್ಪಳ ತಾಲೂಕಿನ ಕಾತರಕಿ-ಗುಡ್ಲಾನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಬೇಳೂರು ಗ್ರಾಮದಲ್ಲಿ ನರೇಗಾ ಕಾಯಕ ಬಂಧುಗಳು ಹಾಗೂ ಕೂಲಿಕಾರರಿಂದ ಬುಧವಾರದಂದು (ಮಾ.20) ರಂದು ಸ್ವಿಪ್ ಜಾಥಾ ಕಾರ್ಯಕ್ರಮ ಜರುಗಿತು.

ಸ್ವಿಪ್ ಜಾಥಾವು ಬೇಳೂರು ಗ್ರಾಮದ ಬೆಟ್ಟದ ಲಿಂಗೇಶ್ವರ ದೇವಸ್ಥಾನದಿಂದ ಆರಂಭವಾಗಿ ಹಿರೇಸಿಂಧೊಗಿ ರಸ್ತೆಯಲ್ಲಿರುವ ಬಸ್ ನಿಲ್ದಾಣ ದವರೆಗೆ ಕಡ್ಡಾಯ ಮತದಾನ, ನಮ್ಮ ಮತ ನಮ್ಮ ಹಕ್ಕು ಇತ್ಯಾದಿ ಘೋಷಣೆಗಳೊಂದಿಗೆ ಸಾಗಿ ಮುಕ್ತಾಯಗೊಂಡಿತು.

ತಾಲೂಕ ಸ್ವಿಪ್ ನೋಡಲ್ ಅಧಿಕಾರಿ ಹಾಗು ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಹನಮಂತಪ್ಪ ಮಾತನಾಡಿ, ಮೇ-7ರಂದು ಜರುಗುವ ಚುನಾವಣೆಯಲ್ಲಿ ಕಡ್ಡಾಯವಾಗಿ ಮತಗಟ್ಟೆ ಕೇಂದ್ರಕ್ಕೆ ಹೋಗಿ ಮತ ಚಲಾಯಿಸುವುದರ ಮೂಲಕ ಸುಭದ್ರ ದೇಶ ನಿರ್ಮಿಸೋಣ. ಮತದಾನ ದಿನದಂದು ನಾವು ಸಮಯ ವ್ಯರ್ಥ ಮಾಡದೇ ಚುನಾವಣೆ ಆಯೋಗ ನಿಗದಿಪಡಿಸಿದ ದಾಖಲಾತಿಗಳನ್ನು ತೆಗೆದುಕೊಂಡು ಹೋಗಿ ನಮಗೆ ಸೂಕ್ತ ಎನಿಸುವ ವ್ಯಕ್ತಿಗೆ ಮತ ಚಲಾಯಿಸಬೇಕು. ಕೊಪ್ಪಳ ತಾಲೂಕಿನ ಬೇಳೂರು ಗ್ರಾಮದಿಂದ ಸ್ವಿಪ್ ಕಾರ್ಯಕ್ರಮ ಪ್ರಾರಂಭಿಸಲಾಗಿದ್ದು ಕೂಲಿಕಾರರು ಮತದಾನ ಮಾಡಿ ಇತರರಿಗೆ ಮಾದರಿಯಾಗಬೇಕೆಂದು ಕರೆ ನೀಡಿದರು. ಕಳೆದ ಬಾರಿಗಿಂತ ಈ ಬಾರಿ ವಿನೂತನವಾಗಿ ಸ್ವಿಪ್ ಕಾರ್ಯಕ್ರಮಗಳನ್ನು ಜರುಗಿಸುವ ಮೂಲಕ ಜಿಲ್ಲೆಯ ಮತದಾನ ಶೇಕಡಾವಾರು ಪ್ರಮಾಣವನ್ನು ಹೆಚ್ಚಿಸೋಣ ಎಂದರು.

ತಾಲೂಕ ಯೋಜನಾಧಿಕಾರಿ ರಾಜೇಸಾಬ ನದಾಫ್ ಮಾತನಾಡಿ, ಮತದಾನ ಪವಿತ್ರವಾದ ಕಾರ್ಯ. ಮತದಾನದ ಮೂಲಕ ದೇಶಕ್ಕೆ ದೊಡ್ಡ ಕೊಡುಗೆ ನೀಡಿದಂತಾಗುತ್ತದೆ ಎಂದರು. ಸ್ವೀಪ್ ಕಾರ್ಯಕ್ರಮದಲ್ಲಿ ಸೇರಿರುವ ಎಲ್ಲಾ ನರೇಗಾ ಕೂಲಿಕಾರರು ನಿಮ್ಮ ಕುಟುಂಬದ 18 ವರ್ಷ ಮೇಲ್ಪಟ್ಟ ಸದಸ್ಯರು ಮತ ಚಲಾಯಿಸುವ ಮೂಲಕ ದೇಶಕ್ಕೆ ಸುಭದ್ರ ಆಡಳಿತ ಒದಗಿಸಲು ಕೈ ಜೋಡಿಸೋಣ ಎಂದರು.

ನಂತರ ಮತದಾರರ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು. ಈ ಸಂದರ್ಭ ತಾಲೂಕ ಸ್ವಿಪ್ ಸಮಿತಿ ಸದಸ್ಯರಾದ ಬಸವರಾಜ ಬಳಿಗಾರ, ತಾಲೂಕ ಐಇಸಿ ಸಂಯೋಜಕ ದೇವರಾಜ ಪತ್ತಾರ, ಪಂಚಾಯತ ಅಭಿವೃದ್ಧಿ ಅಧಿಕಾರಿ ಪೂರ್ಣೇಂದ್ರ ಸ್ವಾಮಿ, ಕರವ ಸೂಲಿಗಾರ ಮರ್ದಾನಸಾಬ, ಡಿಇಓ ನಿಂಗಜ್ಜ ಕರಿಗಾರ, ಕಾಯಕ ಬಂಧುಗಳು, 320 ಕ್ಕೂ ನರೇಗಾ ಕೂಲಿಕಾರರು ಹಾಜರಿದ್ದರು.




# ಶಂಕರನ ಆಭರಣ ಈ ರಾಗ



■ ಅಚಲ ಜಿ ಎಸ್

ಸಂಗೀತದಲ್ಲಿ ಹಲವಾರು ರಾಗಗಳಿವೆ. ಪ್ರತಿಯೊಂದು ರಾಗಕ್ಕೂ ಒಂದಲ್ಲಾ ಒಂದು ಮಹತ್ವವಿದೆ. ಸಂಗೀತಕ್ಕೆ ಕಾಯಿಲೆಗಳನ್ನು ಗುಣಪಡಿಸುವ ಶಕ್ತಿ ಇದೆ ಎಂಬುದು ಎಲ್ಲರಿಗು ತಿಳಿದಿರುವ ಸಂಗತಿ ಅಲ್ಲವೇ?

ಆಯುರ್ವೇದದ ಪ್ರಾಚೀನ ಭಾರತೀಯ ವೈದ್ಯಕೀಯ ವಿಜ್ಞಾನವು ಸಹ ಸಂಗೀತವು ದೇಹ ಮತ್ತು ಮನಸ್ಸಿನ ವಿವಿಧ ಕಾಯಿಲೆಗಳನ್ನು ಹೇಗೆ ಗುಣಪಡಿಸುತ್ತದೆ ಎಂಬುದನ್ನು ವಿವರಿಸುವ ಶಾಖೆಯನ್ನು ಹೊಂದಿದೆ. ಈ ಪ್ರಕ್ರಿಯೆಯನ್ನು ರಾಗ ಚಿಕಿತ್ಸಾ ಅಥವಾ ರಾಗ ವಿದ್ಯೆ ಎಂದು ಕರೆಯಲಾಗುತ್ತದೆ.

ಶಂಕರಾಭರಣ ಎಂಬ ರಾಗವಿದೆ. ಇದು ಮಾನಸಿಕ ಅಸ್ವಸ್ಥತೆಯನ್ನು ಗುಣಪಡಿಸುತ್ತದೆ, ಶಾಂತಿ ಮತ್ತು ಸಾಮರಸ್ಯವನ್ನು ಮರುಸ್ಥಾಪಿಸುತ್ತದೆ. ಇದು ಸಂಪತ್ತನ್ನು ಸುರಿಯುವ ಶಕ್ತಿಯನ್ನು ಸಹ ಹೊಂದಿದೆ. ಶಂಕರಾಭರಣ ರಾಗವನ್ನು ಮಧ್ಯಾಹ್ನದಿಂದ ಸಂಜೆಯವರೆಗಿನ ರಾಗ ಎನ್ನಬಹುದು. ಇದರಲ್ಲಿ ಬಹಳಷ್ಟು ಕೃತಿ, ದೇವರನಾಮ, ಚಲನಚಿತ್ರ ಗೀತೆಗಳಿವೆ.

**ರಾಗ**

ಈ ರಾಗದಲ್ಲಿನ ಏಳು ಶಬ್ದಗಳು ಶಿವನು ಧರಿಸುವ ಅಲಂಕಾರಗಳ ಸಂಕೇತವಾಗಿದೆ.

ಸ ಸ್ವರವು ಸರ್ಪವನ್ನು ಸಂಕೇತಿಸುತ್ತದೆ; ರಿ ಎಂಬ ಸ್ವರವು ವರಗಳನ್ನು ನೀಡುವಾಗ ಒಂದು ಕೈಯಲ್ಲಿ ಹಿಡಿದಿರುವ ರುದ್ರಾಕ್ಷಿ ಹೂವನ್ನು ಪ್ರತಿನಿಧಿಸುತ್ತದೆ; ಗ ಸ್ವರವು ಶಂಕರನ ತಲೆಯ ಮೇಲೆ ಹರಿಯುವ ಪವಿತ್ರ ಗಂಗೆಯನ್ನು ಸಂಕೇತಿಸುವುದು; ಶಿವನು ತನ್ನ ಜಿಂಕೆ ಸಹಚರ ಮೃಗನೊಂದಿಗೆ ಅಲಂಕರಿಸಲ್ಪಟ್ಟು ತನ್ನ ಆಯುಧವಾದ ಪಶುಪಥವನ್ನು ತನ್ನ ಬೆನ್ನಿಗೆ ನೇತುಹಾಕಿಕೊಂಡು ಹೋಗುತ್ತಾನೆ. ಒಂದು ಕೈಯಲ್ಲಿ ಡಮರು ಹಿಡಿದಿದ್ದರೆ, ತಲೆಯ ಮೇಲೆ ಹಾವುಗಳ ರಾಜ ನಾಗೇಂದ್ರ ನಿಂತಿದ್ದಾನೆ. ಈ ಪ್ರತಿಯೊಂದು ಅಂಶಗಳು ಶಿವನ ಅಂಶಗಳು ಅಥವಾ ಅವತಾರಗಳನ್ನು ಸಂಕೇತಿಸುತ್ತವೆ.

ಹಿಂದೂಸ್ತಾನಿ ಸಂಗೀತದಲ್ಲಿ ಈ ರಾಗವನ್ನು ಬಿಲಾವಲ್ ಎಂದೂ ಕರೆಯುತ್ತಾರೆ. ಪಾಶ್ಚಾತ್ಯ ಸಂಗೀತ ಸಿದ್ಧಾಂತದಲ್ಲಿ ಇದನ್ನು ಸಿ ಮೇಜರ್ ಎಂದು ಕರೆಯಲಾಗುತ್ತದೆ. ಈ ರಾಗವು ದೇವಾಲಯಗಳಲ್ಲಿ ಮತ್ತು ಧಾರ್ಮಿಕ ಸಮಾರಂಭಗಳಲ್ಲಿ ಒಂದು ಆರಂಭಿಕ ಮಧುರ ಸ್ಥಾನವನ್ನು ಹೊಂದಿದೆ. ಈ ರಾಗ ಕೇಳುವುದರಿಂದ ಮಾನಸಿಕ ಆರೋಗ್ಯದ ತೊಂದರೆಯಿಂದ ಮುಕ್ತರಾಗಬಹುದು. ಎಲ್ಲರೂ ಒಮ್ಮೆ ಕೇಳಿ, ಶಂಕರಾಭರಣ..

# 10ನೇ ತರಗತಿ ಪರೀಕ್ಷೆಗೆ ನಿಷೇಧಾಜ್ಞೆ ಜಾರಿ

■ ಹಂಪಿ ಟೈಮ್ಸ್ ಕೊಪ್ಪಳ

ಜಿಲ್ಲೆಯಲ್ಲಿ ಮಾರ್ಚ್ 25 ರಿಂದ ಏಪ್ರಿಲ್ 06 ವರೆಗೆ ನಡೆಯಲಿರುವ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳು ಸುಸೂತ್ರವಾಗಿ ಮತ್ತು ದೋಷರಹಿತವಾಗಿ ನಡೆಸಲು ಅನುಕೂಲವಾಗುವಂತೆ ಹಾಗೂ ಪರೀಕ್ಷೆಯಲ್ಲಿ ಯಾವುದೇ ರೀತಿಯ ಅಕ್ರಮ, ಅವ್ಯವಹಾರ ನಡೆಯದಂತೆ ಸಿ.ಆರ್.ಪಿ.ಸಿ 1973 ಕಲಂ 144ರನ್ವಯ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ಅಂತರದ ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಆದೇಶ ಹೊರಡಿಸಿದ್ದಾರೆ.



ಕರ್ನಾಟಕ ಶಾಲಾ ಶಿಕ್ಷಣ ಮತ್ತು ಮೌಲ್ಯ ನಿರ್ಣಯ ಮಂಡಳಿ ವತಿಯಿಂದ ನಡೆಸುತ್ತಿರುವ 2024ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳು ಜಿಲ್ಲೆಯ ಕೊಪ್ಪಳ-23, ಗಂಗಾವತಿ-14, ಕುಷ್ಟಗಿ-15, ಯಲಬುರ್ಗಾ-08, ಕುಕನೂರು-06, ಕಾರಟಗಿ-05 ಮತ್ತು ಕನಕಗಿರಿಯ 04 ಪರೀಕ್ಷಾ ಕೇಂದ್ರಗಳು ಸೇರಿದಂತೆ ಜಿಲ್ಲೆಯ ಒಟ್ಟು 75 ಪರೀಕ್ಷಾ ಕೇಂದ್ರಗಳಲ್ಲಿ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 02 ಗಂಟೆಯವರೆಗೆ ನಡೆಯಲಿವೆ. ಜಿಲ್ಲಾಧಿಕಾರಿಗಳ ಆದೇಶದನ್ವಯ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಎಸ್.ಟಿ.ಡಿ., ಮೊಬೈಲ್ ಪೇಜರ್, ಝರಾಕ್ಸ್, ಟೈಪಿಂಗ್ ಮುಂತಾದವುಗಳನ್ನು ನಿಷೇಧಿಸಲಾಗಿದೆ.

ಪರೀಕ್ಷಾ ಕೇಂದ್ರದಲ್ಲಿ ಪ್ರವೇಶ ಪತ್ರ ಪಡೆದ ವಿದ್ಯಾರ್ಥಿಗಳು ಹಾಗೂ ನಿಯೋಜಿತ ಶಿಕ್ಷಕರನ್ನು, ಜಾಗೃತ ದಳದವರನ್ನು ಹೊರತುಪಡಿಸಿ ಇನ್ನುಳಿದವರಿಗೆ ಪರವಾನಿಗೆ ಇಲ್ಲದೇ ಪರೀಕ್ಷಾ ಕೇಂದ್ರದಲ್ಲಿ ಪ್ರವೇಶ ಮಾಡುವುದನ್ನು ನಿಷೇಧಿಸಲಾಗಿದೆ. ನಕಲು ಮಾಡುವ ಸಾಮಗ್ರಿಗಳನ್ನು ಹಾಗೂ ಹೊರಗಿನಿಂದ ಕಾಪಿ ಬರೆದು ಪರೀಕ್ಷಾ ಕೇಂದ್ರಗಳಲ್ಲಿ ಪೂರೈಸುವುದನ್ನು ನಿರ್ಬಂಧಿಸಲಾಗಿದೆ. 200 ಮೀಟರ್ ಪರೀಕ್ಷಾ ಕೇಂದ್ರಗಳ ಸುತ್ತಲೂ ಜನರು ಮಾರಕಾಸ್ತ್ರಗಳನ್ನು ಹಿಡಿದು ತಿರುಗಾಡುವುದನ್ನು ನಿಷೇಧಿಸಿದೆ.

ಈ ಆದೇಶವು ಮದುವೆ, ಶವ ಸಂಸ್ಕಾರಗಳು ಹಾಗೂ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಿಗೆ ಅನ್ವಯವಾಗುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES




## ನಿತ್ಯ ಪಂಚಾಂಗ

ಮಾಸ: ಪಾಲ್ಗುಣ | ಸಂವತ್ಸರ: ಶೋಭಾಕೃತ

**21–03–2024 – ಗುರುವಾರ**

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಆಶ್ಲೇಷ |
| ಯೋಗ | : ಸುಕರ್ಮ |
| ಕರಣ | : ಭವ |
| ಸೂರ್ಯೋದಯ | : 06:30:55 |
| ಸೂರ್ಯಾಸ್ತ | : 18:37:16 |
| ರಾಹು | : 14:05–15:36 |
| ಯಮಘಂಡ | : 06:31–08:02 |
| ಗುಳಿಕ | : 09:33–11:03 |

## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 20–03–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1582.33 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 765 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 5.704 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1594.2 ಅಡಿ |
| ಒಳ ಹರಿವು | 1660 ಕ್ಯುಸೆಕ್ |
| ಹೊರ ಹರಿವು | 9125 ಕ್ಯುಸೆಕ್ |
| ಸಾಮರ್ಥ್ಯ | 14.896 ಟಿಎಂಸಿ |

## ಫಾರಂ ತ್ರಿ ಕಿರಿಕಿರಿ ತಪ್ಪಿಸಿ

ಮೊದಲ ಪುಟದಿಂದ
ನಿರ್ಮಾಣ ಮಾಡಬೇಕು. ಯಾವುದೇ ಕಾರಣಕ್ಕೆ ಕಳಪೆ ಕಾಮಗಾರಿ ನಡೆಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಯು. ಆಂಜನೇಯಲು, ಟಿ.ತಿಪ್ಪೇಸ್ವಾಮಿ, ಬಿ. ಜಹಂಗೀರ್, ಕೆ.ಕುಮಾರಸ್ವಾಮಿ, ನಜೀರ್ ಸಾಬ್, ಯು.ಅಶ್ವತಪ್ಪ, ವಿರುಪಾಕ್ಷಪ್ಪ, ರಾಮಕೃಷ್ಣ, ಗೋಪಿನಾಥ, ರಾಮನಮಲಿ, ಕೊಟ್ರೇಶ್, ಮೊಹಮ್ಮದ್ ಬಾಷಾ, ಕೋತಿ ಕೊಟ್ರಪ್ಪ, ನೀಲಕಂಠ, ಎಂ.ಶಂಕ್ರಪ್ಪ, ಸಣ್ಣಕಾಶಿ, ಪ್ರಸಾದ್, ರಾಘವೇಂದ್ರ, ಮುಂಡರಗಿ, ಇನ್ನು ಮುಂತಾದವರು ಉಪಸ್ಥಿತರಿದ್ದರು.

## 390.62 ಲೀ. ಮದ್ಯ, ವಾಹನ ಜಪ್ತಿ: ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ

**ಹಂಪಿ ಟೈಮ್ಸ್ ಬಳ್ಳಾರಿ**

ಲೋಕಸಭೆ ಸಾರ್ವತ್ರಿಕ ಚುನಾವಣೆ ಅಂಗವಾಗಿ ಮಾದರಿ ನೀತಿ ಸಂಹಿತೆಯು ಕಟ್ಟುನಿಟ್ಟಾಗಿ ಜಾರಿಗೊಂಡಿದೆ. ಚೆಕ್‌ಪೋಸ್ಟ್‌ಗಳಲ್ಲಿ ಬಿಗಿಭದ್ರತೆಯಿಂದ ಕಾರ್ಯಾಚರಣೆ ನಡೆಯುತ್ತಿದ್ದು, ಮಂಗಳವಾರ ಅನಧೀಕೃತವಾಗಿ ಸಾಗಿಸುತ್ತಿದ್ದ 390.62 ಲೀಟರ್ (ರೂ.1,49,334 ಮೌಲ್ಯ) ಮದ್ಯ ಮತ್ತು ವಾಹನ ಜಪ್ತಿ ಮಾಡಲಾಗಿದ್ದು, ಪ್ರಕರಣ ದಾಖಲಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಅಬಕಾರಿ ಪೊಲೀಸ್ ವತಿಯಿಂದ 307.37 ಲೀಟರ್ (ರೂ.112058 ಮೌಲ್ಯ) ಮದ್ಯ ಮತ್ತು ಪೊಲೀಸ್ ಇಲಾಖೆ ಅಧಿಕಾರಿಗಳಿಂದ 83.25 ಲೀಟರ್ (ರೂ.37276 ಮೌಲ್ಯ) ಮದ್ಯ ವಶಪಡಿಸಿಕೊಳ್ಳಲಾಗಿದ್ದು, ಈವರೆಗೆ ಒಟ್ಟು 28 ಪ್ರಕರಣ ದಾಖಲಿಸಲಾಗಿದೆ ಎಂದಿದ್ದಾರೆ. ಜಿಲ್ಲೆಯಾದ್ಯಂತ ಚುನಾವಣೆಯ ಮಾದರಿ ನೀತಿ ಸಂಹಿತೆ ಕಟ್ಟುನಿಟ್ಟಾಗಿ ಜಾರಿಗೊಳಿಸಲು ಈಗಾಗಲೇ ವಿವಿಧ ತಂಡಗಳನ್ನು ರಚಿಸಲಾಗಿದ್ದು, ಅವುಗಳು ಕಾರ್ಯಪ್ರವೃತ್ತವಾಗಿದೆ. 16 ಫ್ಲೈಯಿಂಗ್ ಸ್ಕ್ವಾಡ್, 24 ಎಸ್‌ಎಸ್‌ಟಿ ತಂಡ ಮತ್ತು 7 ಅಬಕಾರಿ ತಂಡ ಕಾರ್ಯ ನಿರ್ವಹಿಸುತ್ತಿವೆ ಎಂದು ಡಿಸಿ ತಿಳಿಸಿದ್ದಾರೆ.

# ಯುವ ಶಕ್ತಿಯಿಂದ ದೇಶದ ಪ್ರಗತಿ

### ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್ ಹೇಳಿಕೆ | ಯುವಮೋರ್ಚಾ ಸಭೆ



**ಹಂಪಿ ಟೈಮ್ಸ್ ಹೊಸಪೇಟೆ**

ಸಂಘಟನಾತ್ಮಕ ಚಟುವಟಿಕೆಗಳಲ್ಲಿ ಯುವ ಜನತೆ ಹೆಚ್ಚೆಚ್ಚು ತೊಡಗಿಸಿಕೊಳ್ಳುವುದರಿಂದ ದೇಶವನ್ನು ಸಧೃಡವಾಗಿ ಕಟ್ಟಲು ಸಾಧ್ಯ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಬುಧವಾರ ನಡೆದ ಬಿಜೆಪಿ ಯುವ ಮೋರ್ಚಾ ವಿಶೇಷ ಜಿಲ್ಲಾಕಾರ್ಯಕಾರಣಿ ಸಭೆ ಉದ್ಘಾಟಿಸಿ ಮಾತನಾಡಿದರು. ಸಕಾರಾತ್ಮಕ ಚಿಂತನೆಗಳನ್ನು ಮೈಗೂಡಿಸಿಕೊಂಡು ದೇಶದ ಪ್ರಗತಿ ಬಗ್ಗೆ ಚಿಂತಿಸುವ ಯುವಕರು ನಾಯಕರಾಗುತ್ತಾರೆ. ಇಂತ ನಾಯಕರುಗಳನ್ನು ಬೆಳೆಸಲು ಬಿಜೆಪಿ ಪಕ್ಷ ವೇದಿಕೆಯಾಗಿದೆ. ಅಲ್ಲದೇ ಪಕ್ಷ ನಿಷ್ಠೆ, ಪ್ರಮಾಣಿಕತೆಯಿಂದ ಯಾರು ಪಕ್ಷದಲ್ಲಿ ದುಡಿಯುತ್ತಾರೋ ಅಂತವರಿಗೆ ಪಕ್ಷ ಎಂದಿಗೂ ಕೈ ಬಿಡುವುದಿಲ್ಲ. ಹೀಗಾಗಿ ಜಿಲ್ಲಾ ಯುವ ಮೋರ್ಚಾದ ಎಲ್ಲಾ ಪದಾಧಿಕಾರಿಗಳು ಪರಿಣಾಮಕಾರಿ ಸಂಘಟನೆಗೆ ಹೆಚ್ಚು ಒತ್ತು ನೀಡಬೇಕು ಎಂದರು.

ಸಭೆಯ ಅಧ್ಯಕ್ಷತೆವಹಿಸಿದ್ದ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಕಿಚಿಡಿ ಕೊಟ್ರೇಶ್ ಮಾತನಾಡಿ, ಪಕ್ಷ ನೀಡಿರುವ ಯುವ ಚೌಪಾಲ್, ನಮೋ ಯುವ ಭಾರತ್, ಗೋಡೆ ಬರಹ ಸೇರಿ ಹಲವು ಜವಾಬ್ದಾರಿಯನ್ನು ಈಗಾಗಲೇ ಯುವ ಮೋರ್ಚಾದ ಹೂವಿನ ಹಡಗಲಿ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ ಹಾಗೂ ಹೊಸಪೇಟೆಯ ಮಂಡಲ ಪದಾಧಿಕಾರಿಗಳು ತುಂಬಾ ಅಚ್ಚು ಕಟ್ಟಾಗಿ ನಿರ್ವಹಿಸಿದ್ದಾರೆ. ದೇಶದ ವಿಚಾರ ಅಂತ ಬಂದಾಗ ಬಿಜೆಪಿ ಯುವ ಮೋರ್ಚಾ ಸದಾ ಮುಂದೆ ನಿಲ್ಲುತ್ತದೆ. ಜೊತೆಗೆ ಮುಂದಿನ ದಿನಗಳಲ್ಲಿ ಸಾಮಾಜಿಕ ಅನ್ಯಯಗಳ ವಿರುದ್ಧ ಹೋರಾಡಲು ಸಶಕ್ತ ಯುವ ಪಡೆ ಸಿದ್ದವಾಗಬೇಕಿದೆ ಎಂದರು.

ಯುವ ಮೋರ್ಚಾ ರಾಜ್ಯ ಕಾರ್ಯದರ್ಶಿ ಅಡವಿಸ್ವಾಮಿ ಹೀರೆಮಠ ಸಂಘಟನಾತ್ಮಕವಾಗಿ ಮಾತನಾಡಿದರು. ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎಸ್.ರಾಘವೇಂದ್ರ, ಮಂಡಲ ಅಧ್ಯಕ್ಷ ಶಂಕರ್ ಮೇಟಿ, ಜಿಲ್ಲಾ ಯುವ ಮೋರ್ಚಾದ ಪದಾಧಿಕಾರಿಗಳಾದ ಕೆಎಚ್ ಎಂ. ಸಚಿನ್, ವಿನೋದ್ ಜಾಡರ್, ಸೂರಿ ಬಂಗಾರು, ಸಂಗಮೇಶ್ ಕಡೆಮನಿ, ನಂದಿ ವಿಕ್ರಮ್, ಶ್ರೀಕಾಂತ್ ಪೂಜಾರ್, ದೀವಾಕರ್ ಗೌಡ, ಅಜಯ್ ಕುಮಾರ್, ಪುನೀತ್ ಕುಮಾರ್, ವ್ಯಾಸರಾಜ್, ಅಯ್ಯಳ್ಳಿ ರಾಜು, ಸಂಪತ್ ಮೂರ್ತಿ, ಹನುಮನಾಯ್ಕ್ ಇತರರಿದ್ದರು.

# ಶ್ರೀಬಂಡೇರಂಗನಾಥ ಸ್ವಾಮಿ ಉತ್ಸವ ಮೂರ್ತಿ ಬೆಟ್ಟಕ್ಕೆ

### ಡಾ.ಮಹೇಶ್ವರ ಸ್ವಾಮೀಜಿ ಮಾಹಿತಿ | ಮಾ.25ರಂದು ಸ್ವಾಮಿ ರಥೋತ್ಸವ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕಿನ ಐತಿಹಾಸಿಕ ತಂಬ್ರಹಳ್ಳಿಯ ಶ್ರೀಬಂಡೇ ರಂಗನಾಥ ಸ್ವಾಮಿಯ ರಥೋತ್ಸವ ಇದೇ ಮಾ.25ರಂದು ಜರುಗಲಿದೆ ಎಂದು ಜಾತ್ರಾ ಸಮಿತಿಯವರು ತಿಳಿಸಿದರು.

ಮಂಗಳವಾರ ಸಂಜೆ ಸ್ವಾಮಿಯ ಉತ್ಸವ ಮೂರ್ತಿಯನ್ನು ಗ್ರಾಮದಲ್ಲಿ ಅದ್ದೂರಿಯಾಗಿ ಮೆರವಣಿಗೆಯ ಮೂಲಕ ಬೆಟ್ಟಕ್ಕೆ ಕರೆದೊಯ್ಯುವ ಸಂದರ್ಭದಲ್ಲಿ ಮಾಹಿತಿ ನೀಡಿದರು.

ಗ್ರಾಮದ ವಂಶ ಪರಾಂಪರ್ಯ ಧರ್ಮಕರ್ತರಾದ ಶ್ಯಾಮಬೋಗರ ಉದಯ ಭಾಸ್ಕರ್ ಅವರ ಮನೆಯಲ್ಲಿದ್ದ, ಶ್ರೀರಂಗನಾಥೇಶ್ವರ ಹಾಗೂ ಲಕ್ಷ್ಮಿದೇವಿಯ ಉತ್ಸವ ಮೂರ್ತಿಯನ್ನು ವಿಶೇಷವಾಗಿ ಪೂಜಿಸುವ ಮೂಲಕ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಲಾಯಿತು. ಬಳಿಕ ನಂದಿಪುರ ಮಠದ ಡಾ.ಮಹೇಶ್ವರ ಸ್ವಾಮೀಜಿ ಹಾಗೂ ಗದ್ದಿಕೆರೆ ಮಠದ ಚರಂತೇಶ್ವರ ಸ್ವಾಮೀಜಿ ಸಾನ್ನಿಧ್ಯದಲ್ಲಿ, ಗ್ರಾಮದ ನೂರಾರು ಮುತ್ತೈದೆ ಮಹಿಳೆಯರು ಕಳಸಗಳನ್ನಿಡಿದು, ಜೊತೆಗೆ ವಿವಿಧ ಮಂಗಳವಾದ್ಯಗಳೊಂದಿಗೆ ಪ್ರಮುಖ ರಸ್ತೆಯಲ್ಲಿ ಮೆರವಣಿಗೆ ಸಾಗಿ, ಬೆಟ್ಟಕ್ಕೆ ತೆರಳಿದರು.

> **ಹೋಳಿ ಹುಣ್ಣಿಮೆ ದಿನ ಮಾ.25ರಂದು ಸೋಮವಾರ ಸಂಜೆ ರಥೋತ್ಸವ, ಮಾ.26 ರಂದು ಬೇಟೆಗಿಡ ಉತ್ಸವ**

ಡಾ.ಮಹೇಶ್ವರ ಸ್ವಾಮೀಜಿ ಮಾತನಾಡಿ, ಆರಾಧ್ಯ ದೈವ ಶ್ರೀಬಂಡೆ ರಂಗನಾಥೇಶ್ವರ ಸ್ವಾಮಿಯ ರಥೋತ್ಸವ ಪ್ರತಿವರ್ಷದಂತೆ ಹೋಳಿ ಹುಣ್ಣಿಮೆಯ ದಿನ ಮಾ.25ರಂದು ಸೋಮವಾರ ಸಂಜೆ ಭಕ್ತರ ಸಮ್ಮುಖದಲ್ಲಿ ಜರುಗಲಿದ್ದು, ಬಳಿಕ ಮಾ.26ರ ಮಂಗಳವಾರ ಬೇಟೆಗಿಡ ಉತ್ಸವ ಜರುಗಲಿದೆ. ಎಂದಿನಂತೆ ರಥೋತ್ಸವದವರೆಗೂ ನಾನಾ ಪೂಜೆ ಕೈಂಕಾರ್ಯಗಳು ಹಾಗೂ ಕಲ್ಯಾಣೋತ್ಸವಗಳು ಸಮಿತಿ ಹಾಗೂ ಭಕ್ತರ ಸಹಕಾರದಿಂದ ಜರುಗಲಿವೆ ಎಂದರು.

ಈ ವೇಳೆ ಮುಖಂಡರಾದ ಎಚ್.ಬಿ.ನಾಗನಗೌಡ್ರು, ಕಡ್ಡಿ ಚನ್ನಬಸಪ್ಪ, ತಳವಾರ ವೆಂಕೋಬಪ್ಪ, ಬಿ.ಶ್ರೀನಿವಾಸ, ಸಮಿತಿಯ ಅಧ್ಯಕ್ಷ ಬಸರಕೋಡು ಲಕ್ಷ್ಮಣ, ಪದಾಧಿಕಾರಿಗಳಾದ ಎಚ್.ಬಿ. ಗಂಗಾಧರಗೌಡ, ಟಿ.ಉದಯಬಾಸ್ಕರ್, ಬಣಕಾರ ಕೊಟ್ರೇಶ್, ಸರಾಯಿ ಮಂಜುನಾಥ, ಮಂಜುನಾಥ ಪಾಟೀಲ್, ಸುಣಗಾರ ಪರಶುರಾಮ್, ಸೊಬಟಿ ಹರೀಶ್, ಪಾಂಡುರಂಗ, ಏಣಿಗಿ ರಾಮಣ್ಣ, ಗ್ರಾ.ಪಂ.ಅಧ್ಯಕ್ಷೆ ಏಣಿಗಿ ಪೂರ್ಣಿಮಾ, ಬಸವಯೋಗ ಟ್ರಸ್ಟ್‌ನ ಶೆಟ್ರು ಗೀತಾ ಹಾಗೂ ಸದಸ್ಯರು, ಅರ್ಚಕ ಯಲ್ಲಪ್ಪ ಪೂಜಾರ್, ರಂಗನಾಥ, ಮಹಾಬಲೇಶ್ವರ ಸ್ವಾಮಿ, ಕರಿಬಸಯ್ಯ ಮತ್ತಿತರರು ಇದ್ದರು.

# ಕೇಂದ್ರ ಕೃಷಿ ಕಾಯ್ದೆ ಮರುಜಾರಿಗೆ ಆಗ್ರಹ

### ತಾಲೂಕು ಧವಸ, ಧಾನ್ಯಗಳ ವರ್ತಕರ ಸಂಘದಿಂದ ಕೃಷಿ ಮಾರುಕಟ್ಟೆಗೆ ಕಾರ್ಯದರ್ಶಿಗೆ ಮನವಿ

**ಹಂಪಿ ಟೈಮ್ಸ್ ಕೂಡ್ಲಿಗಿ**

ವರ್ತಕರನ್ನು ಸಂಕಷ್ಟಕ್ಕೆ ಸಿಲುಕಿಸುವ ರಾಜ್ಯ ಕೃಷಿ ಕಾಯ್ದೆಯನ್ನು ಹಿಂಪಡೆದು, ಕೇಂದ್ರ ಸರ್ಕಾರದ ಕೃಷಿ ಕಾಯ್ದೆ ಮರು ಜಾರಿ ಮಾಡಬೇಕು ಎಂದು ಒತ್ತಾಯಿಸಿ ತಾಲೂಕು ಧವಸ, ಧಾನ್ಯಗಳ ವರ್ತಕರ ಸಂಘದಿಂದ ಕೃಷಿ ಮಾರುಕಟ್ಟೆಗಳ ಕಾರ್ಯದರ್ಶಿಗೆ ಬುಧವಾರ ಮನವಿ ಪತ್ರ ಸಲ್ಲಿಸಿದರು.



ಸಂಘದ ತಾಲೂಕು ಅಧ್ಯಕ್ಷ ಎಸ್.ಟಿ. ರಾಮಸ್ವಾಮಿ ಮಾತನಾಡಿ, ಕೇಂದ್ರ ಸರ್ಕಾರ ಜಾರಿಗೊಳಿಸಿದ್ದ ಎಪಿಎಂಸಿ ಕಾಯ್ದೆ ವರ್ತಕರಿಗೆ ಅನುಕೂಲವಾಗಿತ್ತು. ಆ ಕಾಯ್ದೆಯಡಿ ವರ್ತಕರು ಆವರಣದ ಹೊರಗಡೆ ಖರೀದಿ ಮಾಡಿದರೆ ಎಪಿಎಂಸಿಗೆ ಯಾವುದೇ ಶುಲ್ಕ ಕಟ್ಟುವಂತಿರಲಿಲ್ಲ ಮತ್ತು ಲಾರಿಯ ಜೊತೆ 35 ಎ ನಮೂನೆಯನ್ನು ಕಳಿಸುವಂತಿರಲಿಲ್ಲ. ಪ್ರಸ್ತುತ ರಾಜ್ಯ ಸರ್ಕಾರ ಆ ಕಾಯ್ದೆ ಹಿಂಪಡೆಯದ ಕಾರಣ ನಾವು 35 ಎ ಹಾಗೂ 35ಬಿಯನ್ನ ಕಂಪನಿಗಳಿಗೆ ನೀಡಬೇಕಾಗುತ್ತದೆ. ಇದರಿಂದ ವರ್ತಕರಿಗೆ ಅನೇಕ ತೊಂದರೆಗಳನ್ನು ಎದುರಿಸಬೇಕಾಗಿದೆ. ಎಪಿಎಂಸಿ ಶುಲ್ಕ ಕಟ್ಟುವುದರಿಂದ ರೈತರು ಬೆಳೆದ ಹುಟ್ಟುವಳೀಯ ಮೂಲ ಬೆಲೆಗೆ ನೇರವಾಗಿ ಹೊಡೆತ ಬೀಳುತ್ತದೆ ಎಂದು ವರ್ತಕರು ಕೃಷಿ ಉತ್ಪನ್ನ ಮಾರುಕಟ್ಟೆ ಕಾರ್ಯದರ್ಶಿ ಬಸವರಾಜಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ತಾಲೂಕು ಧವಸ, ಧಾನ್ಯಗಳ ವರ್ತಕರ ಸಂಘದ ಗೌರವಾಧ್ಯಕ್ಷ ಎಂ.ಶಿವಣ್ಣ, ಕಾರ್ಯದರ್ಶಿ ಎಸ್.ಪ್ರಕಾಶ್, ರಂಗಾ ಶ್ರೀನಿವಾಸ, ಖಜಾಂಚಿಗಳಾದ ಚೌಡಾಪುರ ಗುರು, ಶಿವಯೋಗಿ, ಉಪಾಧ್ಯಕ್ಷ ಕೆ.ವಿ.ಹನುಮಂತರಾಜ್, ಗೋವಿಂದಪ್ಪ, ಬಡೇಲಡುಕು ಬಸವರಾಜ್, ಕೋಡಿ ಬಸವರಾಜ್, ಶಿವಪುರ ವಿನಯ್, ಹನುಮಂತರಾಜ,ಸಿದ್ದೇಶ್, ಕೌದಿ ವಿಜಯ್, ಹೊನ್ನೂರಪ್ಪ, ಜಿ. ಆರ್. ಚಂದ್ರಪ್ಪ ಸೇರಿದಂತೆ ಅನೇಕ ವರ್ತಕರು ಉಪಸ್ಥಿತರಿದ್ದರು.

# ಕನ್ನಡ ಸಾಹಿತ್ಯಕ್ಕೆ ವಚನ ಸಾಹಿತ್ಯದ ಕೊಡುಗೆ ಅಪಾರ



**ಹಂಪಿ ಟೈಮ್ಸ್ ಕೊಟ್ಟೂರು**

ಕನ್ನಡ ಸಾಹಿತ್ಯಕ್ಕೆ ವಚನ ಸಾಹಿತ್ಯದ ಕೊಡುಗೆ ಅಪಾರ ಎಂದು ನಿಂಬಳಗೇರೆ ಪ್ರೌಢಶಾಲೆ ಕನ್ನಡ ಶಿಕ್ಷಕರು ಕೆ.ವೀರಭದ್ರಪ್ಪ ಅವರು ಹೇಳಿದರು.

ಕೊಟ್ಟೂರಿನ ತುಂಗಭದ್ರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಕೊಟ್ಟೂರು ತಾಲೂಕು ಘಟಕದ ವತಿಯಿಂದ ಹಮ್ಮಿಕೊಂಡಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು. ಕನ್ನಡ ಸಾಹಿತ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿದ್ದು ಅದರಲ್ಲಿ ವಚನ ಸಾಹಿತ್ಯ ವಿಶೇಷ ಸಾಹಿತ್ಯವಾಗಿದೆ. ವಚನಸಾಹಿತ್ಯವನ್ನು ಬಸವ ಪೂರ್ವ ವಚನಸಾಹಿತ್ಯ,ಬಸವಯುಗ ವಚನಸಾಹಿತ್ಯ, ಹಾಗೂ ಬಸವೋತ್ತರ ವಚನ ಸಾಹಿತ್ಯ ಎಂದು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ.


ವಚನಕಾರರು ಕಾಯಕಕ್ಕೆ ಆದ್ಯತೆ ನೀಡಿ ಕಾಯಕವೇ ಕೈಲಾಸ ಎಂಬ ತತ್ವವನ್ನು ಅಳವಡಿಸಿಕೊಂಡು ಸಮಾನತೆಯ ಸಮಾಜವನ್ನು ಕಟ್ಟ ಬಯಸಿದರು. ದೇವರ ದಾಸಿಮಯ್ಯ ಅಲ್ಲಮ ಪ್ರಭು ಬಸವಣ್ಣ, ಅಕ್ಕಮಹಾದೇವಿ ಆಯ್ದಕ್ಕಿ ಲಕ್ಕಮ್ಮ ಮುಂತಾದ ಅನೇಕ ಶರಣರು ತಮ್ಮ ವಚನಗಳ ಮೂಲಕ ಸಮಾಜವನ್ನು ಜಾಗೃತಗೊಳಿಸಿದರು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಸಾಪ ತಾಲೂಕು ಘಟಕದ ಅಧ್ಯಕ್ಷರಾದ ದೇವರಮನಿ ಕೊಟ್ರೇಶ್ ವಹಿಸಿದ್ದರು. ಕಸಾಪ ಗೌರವ ಕಾರ್ಯದರ್ಶಿ ಎಸ್ ರಾಜಣ್ಣ ಉದ್ಘಾಟನೆ ನೆರವೇರಿಸಿದರು.

ಮುಖ್ಯ ಅತಿಥಿಗಳಾಗಿ ಬಿ.ಇಡಿ ಕಾಲೇಜಿನ ಪ್ರಾಂಶುಪಾಲರಾದ ಎಸ್.ಎಂ.ರವಿಕುಮಾರ್ ಹಾಗೂ ಕಸಾಪ ಕಾರ್ಯಕಾರಿ ಸಮಿತಿ ಸದಸ್ಯರು ಈಶ್ವರಪ್ಪ ತುರಕಾಣಿ ಹಾಗೂ ರಾಜೇಂದ್ರ ಗೌಡ್ರು ಹಾಗೂ ಕಾಲೇಜಿನ ಉಪನ್ಯಾಸಕ ವರ್ಗದವರು ಉಪಸ್ಥಿತರಿದ್ದರು. ವಿದ್ಯಾರ್ಥಿನಿ.ಕುಮಾರಿ ಸಿ.ಎಂ.ನಂದಿತ ಪ್ರಾರ್ಥಿಸಿದರು. ಪ್ರ.ಶಿಕ್ಷಣಾರ್ಥಿ ಹೆಚ್.ಸಂಜಯ್ ಸ್ವಾಗತಿಸಿದರು.ಕಸಾಪ ಗೌರವ ಕಾರ್ಯದರ್ಶಿ ಅರವಿಂದ್ ಬಸಾಪುರ್ ಕಾರ್ಯಕ್ರಮ ನಿರೂಪಿಸಿದರು.

# ಮಾ.22 ಕ್ಕೆ ಬಳ್ಳಾರಿ ಗ್ರಾಮೀಣ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ**



ಗ್ರಾಮೀಣ ಜೆಸ್ಕಾಂ ವ್ಯಾಪ್ತಿಯ 220/110/11ಕೆ.ವಿ ಅಲ್ಲೀಪುರ ಸ್ವೀಕರಣ ಕೇಂದ್ರದ 20ಎಮ್.ವಿಎ ಪರಿವರ್ತಕ–1 ಮತ್ತು 2ರ ಆಯಿಲ್ ಸೋರಿಕೆಯ ತಡೆಗಟ್ಟುವ ಕಾರ್ಯವನ್ನು ತುರ್ತಾಗಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಮಾ.22 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 04 ಗಂಟೆಯವರೆಗೆ 220/110/11ಕೆ.ವಿ ಅಲ್ಲೀಪುರ ಸ್ವೀಕರಣ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ 11ಕೆ.ವಿ ಮಾರ್ಗಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಬಳ್ಳಾರಿ ಗ್ರಾಮೀಣ ಜೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮೋಹನ್‌ಬಾಬು ಅವರು ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು: ಎಫ್–37 ಬೆಳಗಲ್ಲು ತಾಂಡ ಕೈಗಾರಿಕೆ ಪ್ರದೇಶ ಫೀಡರ್ ಮಾರ್ಗದ ಬೆಳಗಲ್ಲು ಗ್ರಾಮ, ಬೆಳಗಲ್ಲು ತಾಂಡ ಕೈಗಾರಿಕೆ ಪ್ರದೇಶ. ಎಫ್–38 ಬೆಳಗಲ್ಲು ತಾಂಡ ಕೈಗಾರಿಕೆ ಪ್ರದೇಶ ಫೀಡರ್ ಮಾರ್ಗದ ಬೆಳಗಲ್ಲು ಬೆಳಗಲ್ಲು ತಾಂಡ, ಜಾನೆಕುಂಟೆ, ಜಾನೆಕುಂಟೆ ತಾಂಡ, ಹರಗಿನದೋಣಿ. ಎಫ್–39 ಆಲ್ಲಿಪುರ ನಗರಪ್ರದೇಶ ಫೀಡರ್ ಮಾರ್ಗದ ಅಲ್ಲೀಪುರ ಗ್ರಾಮ, ಬೈ ಪಾಸ್ ರಸ್ತೆ. ಎಫ್–74 ಗೌತಮ್ ನಗರ ಎನ್.ಜೆ.ವೈ ಫೀಡರ್ ಮಾರ್ಗದ ಡಿಸಿ ನಗರ, ಪ್ರಶಾಂತ ಆಲದಹಳ್ಳಿ ಹಾಗೂ ಮುಂತಾದ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸಾರ್ವಜನಿಕರು, ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




## AFFIDAVIT

I, **Abdul Majid** S/o Abdul Nabi Shaikh, Aged 40 years, R/o D.No.91, 28th Ward, Near Valmiki Circle, Chapparadalli, Hosapete - 583201, Vijayanagara Dist.

My name is in Mentioned in my old passport as **Shaikh Abdul Majid Abdul Nabi.** Update my name as **Abdul Majid** as per Adhaar and pan card. vide affidavit dated 19-03-2024 before Notary T.Hanumantha at Hosapete-583201

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA